ಹೆಚ್ಚಿನ ಬರಹಗಳು

'ಹೂ'

ತಾರೆಯ ಬಳಗದ ತಾಳದ ಕುಣಿತ!
ಕುಂದಗೋಳದಾ ಕೆಳೆಯರ ಕುಣಿತ!
        ಆಟ–ಪಾಟ–
        ನೋಟ–ಮಾಟ!
ಚಿಮ್ಮು ಜವ್ವನದ ಹಮ್ಮಿನ ಕುಣಿತ,–
ಅಮ್ಮನ ಭಕ್ತಿಯ ಶಕ್ತಿಯ ಕುಣಿತ,–
        ಬಾ, ಓ, ಜೀವಾ
        ಕೈ ಕೈ ಕೋವಾ
ನಾವೂ ಕೋವಾ, ಮಣಿವ, ಕುಣಿವ;–
ಮಿಡಿಯಸು, ನುಡಿಯಿಸು, ನುಡಿಯದೆ ಮಡಿವೆ,
ಕೊರಳನು ತೆರೆಯಿಸು, ಕೂಗುವೆ, ನುಡಿವೆ,–
        ಬನ್ನಿ, ಬನ್ನಿ,
        ನಾವೇ ನಾಡು,
        ನಾಡೇ ನಾವು,
        ಬನ್ನಿ, ಬನ್ನಿ,
        ಕಾಣಿಕೆ ತನ್ನಿ,
ಕುಂದಗೋಳದಾ ತಾರೆಗಳೆಡೆಗೆ,
ಕುಂದದ ಕುಚ್ಚಿನ ಹೂವಿನ ಹೊಡೆಗೆ,
ಗಂಡ್ಸೂರ್, ಎಂಗ್ಸೂರ್ ಒನ್ನಳ್ಳೆಡೆಗೆ,
ಒಲವಿನ ಹುಚ್ಚಿನ ಶಾಂತಿಯ ನಡೆಗೆ,
ನಚ್ಚಿನ ನಾಡಿನ ಬಿಡುಗಡೆ ಕಡೆಗೆ,
ಅಮ್ಮನಡಿಗಳಾ ಮುಡುಪಿನ ಕೊಡೆಗೆ,
ಕನ್ನಡ ಕವಿಗಳ ಚಿನ್ನದ ಮುಡಿಗೆ,
ಅರೆ ಗುಲಾಬಿಯಾ ಬಿರಿಹೂ ಮುಡಿಗೆ,
        ಕನ್ನಡ ನುಡಿಗೆ,
        ಮಿಡಿಗೆ, ಕಿವಿಗೆ,
        ನೆಗೆ ಓ ಜೀವಾ,
        ಓ ನನ್ನ ಜೀವಾ,
ಕುಂದಗೋಳದಾ ಕಂದರ ಒಳಿಗೆ,
ಆನಂದ ವೆಳ್ಳದ ಸುತ್ತುವ ಸುಳಿಗೆ,
ಅಮ್ಮನ ಭಕ್ತಿಯ ಭಜನೆಯ ಕೂಟಕೆ,
ಅಮ್ಮನ ಹರಕೆಯ ಜಾತ್ರೆಯ ಹೂಟಕೆ,
        ನಡೆ ಎಲೆ ಜೀವಾ,
        ನೆಗೆ ಎಲೆ ಜೀವಾ,
        ಕೈ ಕೈ ಕೋದು,
        ಕನ್ನಡ ಕಾದು,
ಕನ್ನಡ ತಾಯಿಯ ಬನ್ನವ ತೀದು,
ಕುಂದಗೋಳದಲಿ ಜಯ, ಜಯ, ಜೀವಾ!

[ಕುಂಗೋಳದ ತಾರೆಯ ಬಳಗದವರು ಪ್ರಕಟಿಸಿದ 'ಹೂ' ಕವನ ಸಂಕಲನದ ಮುನ್ನುಡಿ; ೧೯೩೭]

'ಮೊಗ್ಗಿನ ಮಾಲೆ'

ನಿಮ್ಮ ಈ ಇನ್ನುಡಿಗೆ ಕೇಳುವಿರಿ ನನ್ನ
ಮುನ್ನುಡಿಯ, ಕೆಳೆಯರೇ, ನುಡಿವೆನೇನನ್ನ?
ನಿಮ್ಮೊಲುಮೆ ಸವಿನೆನಪನಲ್ಲದೇನನ್ನ?
ನಲವಿನಲಿ ನಾಡಹಬ್ಬಕೆ ಕರೆದಿರೆನ್ನ,
ಒಲವಿನಲಿ ಕನ್ನಡದ ಕರುಳೆಂದಿರೆನ್ನ,
ಮೆಚ್ಚಿತ್ತು ಗೆಲವೆರೆದು ಕಳುಹಿದಿರಿ ಮುನ್ನ,
ನಾ ನಿಮ್ಮ ನಂಟನಾದೆನು, ನಿಮ್ಮ ಬಂಟ–
ತಾಯ ಮೆರಸುತ ಬಹೆವು, ಬನ್ನಿ ದೆಸೆಯಂಟ,
ಬಂಟನಾಗೊಬ್ಬ ಬರೆ ಮತ್ತೊಬ್ಬ ನಂಟ.
ಹಿರಿಯ ಪರಿಸೆಯ ಕೂಡಿ, ಕನ್ನಡದ ನುಡಿಯ,
ಕನ್ನಡಿಗತನವೆಂಬ ಬಾವುಟದ ಕುಡಿಯ,
ಕಟ್ಟಿದಿರಿ, ತಾಯಿಗಿಟ್ಟಿರಿ ಹೊನ್ನ ಮುಡಿಯ.
ಮನಸು ನಿಲಲಾರದೆಯೆ ನಾನೋಡಿ ಬಂದೆ;
ಮೊಗ್ಗುಮಾಲೆಯನಲ್ಲಿ ನಾ ನೋಡಿ ಬಂದೆ,
ಪರಿಸೆಗದ ಬೆಳಗಿದಿರಿ, ಕಂಡು ನಾನೆಂದೆ–
ಈ ನಾಡು ಕನ್ನಡದ ಹೊಳೆಗೆ ತಲೆ ಮೂಡು,
ಕಾಶಿ ಕನ್ನಡಿಗನಿಗೆ, ಹಿರಿಯರಾ ಬೀಡು;
ಅವರ ಬೀಜವ ನೆಲದಿ ಮರಸಿತ್ತು ಸೂಡು–
ಮಳೆಯಾಯ್ತು– ಅವರ ತೇಜವೆ, ಮತ್ತೆ, ನೋಡು,
ನೆಲವ ಬಿರಿಯುತ ಮೊಳೆತು ಮೊಗ್ಗೆ ಹೂ ಬೀಡು!
ಅರಳಿದರು, ಎಚ್ಚತ್ತರದೊ ಬೆಳ್ಳಿ ಮೂಡು!
ಮುನ್ನುಡಿಯ ಕೇಳುವಿರಿ, ಕೆಳೆಯರೇ, ನನ್ನ;
ಇನ್ನುಡಿಯ ಹಾಡಿಹಿರಿ, ಕೂಡಿಹಿರಿ, ಮುನ್ನ,
ಸವಿನೆನಪನಲ್ಲದೇ ನುಡಿವೆನೇನನ್ನ?

[ಹೈದರಾಬಾದಿನ ತರುಣ ತಂಡದವರು ಪ್ರಕಟಿಸಿದ 'ಮೊಗ್ಗಿನ ಮಾಲೆ" ಕವನ ಸಂಕಲನದ ಮುನ್ನುಡಿ; ೧೯೩೭]

ಕನ್ನಡ ರಾಮಾಶ್ವಮೇಧ

ಸಂಸ್ಕೃತವನ್ನು ತಿಳಿಯದೆಯೇ ಕನ್ನಡದಲ್ಲಿ ಪಾಂಡಿತ್ಯವನ್ನು ಹೊಂದಿ ಕನ್ನಡ ಕಾವ್ಯಗಳನ್ನು ಬರೆಯಬಹುದೆಂದು ಹಿಂದಿನ ಕವಿಗಳು ಬಗೆದಂತೆ ಕಾಣಬರುವುದಿಲ್ಲ. ಉತ್ತಮ ಗ್ರಂಥಗಳೆಂದು ಹೆಸರು ಪಡೆದುವುಗಳಲ್ಲಿ ಯಾವುದನ್ನು ತೆಗೆದರೂ, ಒಡನೆಯೆ ಸಂಸ್ಕೃತ ಶೈಲಿ ಮತ್ತು ಸಂಸ್ಕೃತ ಪದಗಳ ಅಬ್ಬರವೇ ಹೊರತು ನಮ್ಮ ಕನ್ನಡವನ್ನು ಕಾಣಬೇಕಾದರೆ, ಮರಳಿನಲ್ಲಿ ಚಿನ್ನದ ಅದಿರುಗಳನ್ನು ಹುಡುಕಬೇಕಾಗುವುದು. ಕನ್ನಡದಲ್ಲಿ ಅಕ್ಕರೆಯುಳ್ಳವರಿಗೆ ಇದು ರುಚಿಸುವುದಿಲ್ಲ. ಕನ್ನಡ ಗ್ರಂಥವೆಂದು ಕರೆಯುವುದೇಕೆ? ಸಂಸ್ಕೃತ ಗ್ರಂಥದಲ್ಲಿ ಪ್ರಮಾದದಿಂದ ಕನ್ನಡವು ಸೇರಿಕೊಂಡಂತೆ ಬರೆಯುವುದೇಕೆ? ನಾಗಚಂದ್ರ, ಅಂಡಯ್ಯ, ಸಿಂಗರಾರ್ಯ ಮೊದಲಾದ ಕೆಲವರು ಕನ್ನಡವನ್ನೇ ಮುಂದಿಟ್ಟು, ಸಂಸ್ಕೃತವನ್ನು ಬಿಟ್ಟಾಗಲಿ, ಕೊಂಚ ಕೊಂಚ ಬೆರಸಿಯಾಗಲಿ ಬರೆದಿರುವುದನ್ನು ನೋಡಿದರೆ ಆನಂದವಾಗುವುದು. ಅಗ್ಗಳ, ಷಡಕ್ಷರಿ, ರುದ್ರಭಟ್ಟ ಮೊದಲಾದ ಹಲವರ ಸಂಸ್ಕೃತದ ಅಬ್ಬರದಿಂದ ಬಂದ ತಲೆನೋವು, ಕನ್ನಡದಿಂದ ತುಂಬಿ ತುಳುಕುವ 'ಶ್ರೀ ರಾಮಾಶ್ವಮೇಧ' ದಂತಹ ಗ್ರಂಥವನ್ನು ಓದುವುದರಿಂದ ಯಾರಿಗೆ ತಾನೆ ಹೋಗದಿರುವುದು?

'ಶ್ರೀ ರಾಮಾಶ್ವಮೇಧ' ವನ್ನು ಬರೆದ ಮುದ್ದಣನನ್ನು ಕುರಿತು ಹೆಚ್ಚಾಗಿ ಏನೂ ತಿಳಿದು ಬಂದಿಲ್ಲ. ಹದಿನೇಳನೆಯ ಶತಮಾನದಲ್ಲಿದ್ದ ತಿರುಮಲಾರ್ಯ ಸಿಂಗರಾರ್ಯರಿಗಿಂತ ಈಚಿನವನೆಂದು ನಮಗೆ ತೋರುವುದು. ಅದು ಹೇಗೆ ಆದರೂ ಆಗಲಿ, ಈತನು ಕನ್ನಡದಲ್ಲಿ ಹೆಚ್ಚಾಗಿ ಅಕ್ಕರೆಯುಳ್ಳವನೆಂದು ತೋರಿಸುವುದು ನಮ್ಮ ಕೆಲಸ. ತನ್ನ ಕಥೆಯನ್ನು ಹೆಂಡತಿಗೆ ಹೇಳತೊಡಗಿ ಹೀಗೆ ಮೊದಲು ಮಾಡಿರುವನು:

ಮುದ್ದಣಂ: ಆಲಿಸು ಸ್ವಸ್ತಿ ಶ್ರೀಮತ್ ಸುರಾಸುರೇಂದ್ರನರೇಂದ್ರ ಮುನೀಂದ್ರ ಫಣೀಂದ್ರ ಮಣಿ ಮಕುಟತಟಘಟಿತ–
ಮನೋರಮೆ: ಓ ಓ! ತಡೆ! ತಡೆ!. . .ಲೇಸು, ಲೇಸು! ನೀರಿಟೆಯದ ಗಂಟಲೊಳ್
ಕಡುಬಂ ತುಱುಕಿದಂತಾಯ್ತು:ಕನ್ನಡದ ಸೊಗಸನಱಿಯಲಾರ್ತನಿಲ್ಲೆನಗೆ ಸಕ್ಕದದ ಸೊಗಸಂ
ಪೇೞ್ವುದು ಗಡ!
ಮುದ್ದಣಂ: ಅಪ್ಪೊಡಿನ್ನೆಂತೊ ಒರೆವೆಂ?
ಮನೋರಮೆ: ತಿರುಳ್ಗನ್ನಡದ ಬೆಳ್ನುಡಿಯೊಳೆ ಮರುಳೊಂದೆ ಪೇೞ್ವುದು, ಕನ್ನಡಂ ಕತ್ತುರಿಯಲ್ತೆ!
ಮುದ್ದಣಂ: ಅಪ್ಪುದಪ್ಪುದು. ಆದೊಡಂ ಸಕ್ಕದಮೊಂದೆ, ರನ್ನವಣಿಯಂ ಪೊನ್ನಿಬಿಗಿದಂತೆಸೆಗುಂ;
ಅದಱಿಂ. . .ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ,
ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ.

ನಮ್ಮ ಕನ್ನಡದ ಏಳಿಗೆಗಾಗಿ ಎಷ್ಟೋ ತೊಂದರೆಗೊಂಡಿರುವ ಮೆ॥ ರೈಸ್ ಸಾಹೇಬರವರು 'ಪದ್ಯಸಾರ'ದ ಪೀಠಿಕೆಯಲ್ಲಿ, ಕನ್ನಡಿಗರು ತಿರುಳುಳ್ಳ ಇಂಪಾದ ತಮ್ಮ ತಾಯ್ನುಡಿಯಲ್ಲಿ ಬರೆದರೆ ಲೇಸೆಂದು ಹೇಳುವರು. ಕನ್ನಡಿಗರಲ್ಲದ ಇವರೇ ಹೀಗೆ ಹೇಳುವಾಗ ನಮ್ಮ ತಾಯ್ನುಡಿಯನ್ನು ನಾವು ಮುಂದಕ್ಕೆ ತರಬೇಡವೆ? ಸಂಸ್ಕೃತವನ್ನು ಬಿಟ್ಟೇಬಿಡಬೇಕೆಂದು ನಾವು ಹೇಳುವುದಿಲ್ಲ; ಹಾಗೆ ಹೇಳಿದಲ್ಲಿ ತುಪ್ಪವಿಲ್ಲದೆ ಊಟ ಮಾಡು ಎಂದಂತಾಗುವುದು. ಬರಿಯ ತುಪ್ಪವನ್ನೇ ತಿಂದು, ಊಟವಾಯ್ತೆಂದು ಹೇಳಲೂ ಆಗುವುದಿಲ್ಲ. ಕನ್ನಡದ ಮಾತು ದೊರೆಯದಲ್ಲಿ, ಬಿಗಿಯನ್ನು ತಪ್ಪಿಸಬೇಕಾದಲ್ಲಿ, ಇಂಪನ್ನು ಹೆಚ್ಚಿಸುವಲ್ಲಿ, ಎಂತೂ ಅವಶ್ಯಕತೆ ಇದ್ದಲ್ಲಿ, ಸಂಸ್ಕೃತವನ್ನು ಬೆರಸಬೇಕೇ ಹೊತರು ಮನಸ್ಸಿಗೆ ಬಂದಂತೆ ಬೆರಸುವುದು ಸರಿಯೇ? ಕೆಲವರು ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ತರುವುದಕ್ಕೆ ಸಂಸ್ಕೃತವನ್ನು ಬರೆದೇ ತೀರಬೇಕೆಂದು ಹೇಳುವರು. ಕನ್ನಡದಲ್ಲಿ ಇದ್ದಮಟ್ಟಿಗೆ ಇವುಗಳನ್ನು ತಂದೇ ತರಬಹುದು; ಕೆಲವರು ತಂದೂ ಇರುವರು; ಮುದ್ದಣನೇ ಹಲವೆಡೆ ತಂದಿರುವನು. ಆದರೆ ಶಬ್ದಾಲಂಕಾರವು ಭೂಷಣವೆಂದು ನಮಗೆ ತೋರುವುದಿಲ್ಲ.

ಧೀರಂ ಧೀರಂಜಿತಂ ನೀಂ ತಡೆದಿರದೆ ಯಶಸ್ಸಾಧನಂ ಸಾಧನಂ ಮು–
ನ್ನೀರಂ ನೀರಂಧ್ರವಾದರ್ಪಿಸೆ ನಡೆದದಟಿಂದಾನವಂ ದಾನವಂ ದುಃ
ಪಾರಂ ಪಾರಂ ಕ್ಷಣಂ ಮಾರ್ಕೊಳೆ ಮಡಿಯಿಸು ಕಾಮಾರಿವೊಲ್ ಮಾರಿವೊಲ್ ನೀ
ಹಾರಂ ಹಾರಂ ಹರಾಂಗಂ ಬರೆ ನಿಜಯಶದೊಳ್ ಭಾಸಮಾನಂ ಸಮಾನಂ

(ಜಗನ್ನಾಥ ವಿಜಯಂ ೧೫–೫೬)

ಜಾತಿಗೆ ಪುಷ್ಪಜಾತಿಗಳ ಜಾತಿಯದೇಂ ಸಮಜಾತಿಯಪ್ಪುದೇ
ಜಾತಿಯೆ ಜಾತಿ ಮಿಕ್ಕಲರ ಜಾತಿಯದೇತಱ ಜಾತಿಯೆಂದು ತಾಂ
ಜಾತಿಯ ಜಾತಿಯಂ ಪೊಗೞ್ದು ಜಾತಿವಿಚಾರವಿದಗ್ಧೆ ಕೊಯ್ದಳಾ
ಜಾತಿಯನಾ ವಿಟೀವಿಟವಿಭೂತಿಯನಾ ರತರಾಗದೂತಿಯಂ

(ಜಗನ್ನಾಥ ವಿಜಯಂ ೧೪–೮೨)

ಇದೀಗ ಸಂಸ್ಕೃತವನ್ನು ಸೇರಿಸಿ ಬರೆವ ಸೊಗಸು! ಇವೆರಡರಲ್ಲಿ ಆನಂದವನ್ನು ಕೊಡುವ ಸೊಗಸು ಎಲ್ಲಿ ಅಡಗಿರುವುದೋ ತಿಳಿಯದು. ಅರ್ಥಾಲಂಕಾರಗಳು ಭೂಷಣಗಳೇ ಸರಿ; ಆದರೆ ಕೂದಲನ್ನು ಸೀಳಿದಂತೆ ನೂರಾರು ಭೇದಗಳನ್ನಿಟ್ಟುಕೊಂಡು, ಕವಿಗಳು ಅಲಂಕಾರಗ್ರಂಥಗಳನ್ನು ಗಟ್ಟಿಮಾಡಿ, ಕಾವ್ಯಕ್ಕೆ ಅಲಂಕಾರವೇ ಜೀವವೆಂದು, ಹೊಂದುವ ಕಡೆ ಹೊಂದದ ಕಡೆ, ಬಾಯಿ ತೆರೆದಾಗಲೆಲ್ಲಾ ಅಲಂಕಾರಗಳು ಸುರಿಯುವಂತೆ ಬರೆದಿಟ್ಟರೆ ಚೆಲುವೆಂದು ಹೇಳುವರೊ? ಈ ಪದ್ಯವನ್ನು ನೋಡಿ:

ಯೋಗಿಗಳ ಚಿತ್ತಮಪಗತ
ರಾಗಮದಂ ನಡುಗಿಸಲ್ಕೆ ಸಾಲ್ದುದು ತಳಿರ್ಗಳ್
ರಾಗಿಗಳವರ್ಕೆ ನಡುಕಮ
ನಾಗಿಸದಿರ್ಕುಮೆ ವಸಂತಮಯಸಮೀರಂ (ಮಲ್ಲಿನಾಥ ಪುರಾಣ ೬–೧೯)

ಈ ಗದ್ಯವನ್ನು ನೋಡಿ:

ಅದು (ವಿಂಧ್ಯಾಟವಿ) ಸಮರಸಮುದ್ಯತನಂತೆ ವೇಣುಬಾಣಾನಾರೋಪಿತಶಿಳೀಮುಖಮಂ
ವಿವಿಕ್ತ ಸಿಂಹನಾದಮು.. .ಅವನಿಪತಿ ಗೃಹದ್ವಾರದಂತೆ ನೇತ್ರಲತಾಶತದುಷ್ಪ್ರವೇಶಮುಂ. ..
ಕ್ರೂರಸತ್ವಮಾಗಿಯುಂ ಮುನಿಜನಸೇವಿತಮುಮೆನಿಪುದು (ಕಾದಂಬರಿ ೧-೧೦೦)

ಇವುಗಳ ಭಾವದ ಗಂಭೀರತೆ ಏನೋ, ಇವುಗಳು ಕೊಡುವ ಆನಂದವೇನೋ ನಮಗಂತೂ ತಿಳಿದಿಲ್ಲ. ಕನ್ನಡದಲ್ಲಿ ಅಕ್ಕರೆಯಿಲ್ಲವೆಂದು ಓದುವವರನ್ನು ದೂರುವವರು ಹಲವರುಂಟು. ಇಂತಹ ಅಲಂಕಾರ ಪದ್ಯಗಳನ್ನು ಓದಲು ಕಟ್ಟುಬಿದ್ದು ಗೋಳಾಡುವವರನ್ನು ನೋಡಿ ಕನಿಕರಪಡದೆ, ಕನ್ನಡದಲ್ಲಿ ಅಕ್ಕರೆಯನ್ನಿಡಿರೆಂದು ಯಾವ ಮೋರೆಯಿಂದ ತಾನೆ ಹೇಳಲಾಗುವುದು?

ಮುದ್ದಣನು ಕನ್ನಡವನ್ನೇ ಮುಂದಿಟ್ಟು, ಸಂಸ್ಕೃತವನ್ನು ಬೇಕಾದಲ್ಲಿ ಸೇರಿಸಿ, ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ಎಲ್ಲೆಲ್ಲಿಯೂ ಎರಚದೆ ಬಿಗಿಹಿಡಿದು ಬರೆದಿರುವುದು ಹೊಗಳತಕ್ಕುದೇ ಸರಿ. ಇದರಲ್ಲಿ ಇರುವಷ್ಟು ಅಲಂಕಾರವೂ ಹೆಚ್ಚೇ ಎಂದು ನಮಗೆ ತೋರುವುದು; ಹಿಂದಿನವರಿಂದ ಕದಿಯದೆ, ತನ್ನದೇ ರೀತಿಯಲ್ಲಿ ಹೆಳುವುದರಿಂದಲೂ, ಈ ವಿಷಯಗಳಲ್ಲಿ ಅಭಿರುಚಿಯು ಬೇರೆ ಬೇರೆಯಾಗಿರುವುದರಿಂದಲೂ, ಹೆಚ್ಚು ಆಕ್ಷೇಪಣೆಯನ್ನು ಮಾಡಲೊಲ್ಲೆವು. ಇದಲ್ಲದೆ, ಇವನ ಶೈಲಿಯು ಸ್ವಾಭಾವಿಕವಾಗಿಯೂ ಮನೋಹರವಾಗಿಯೂ ಲಲಿತವಾಗಿಯೂ ಇರುವುದು: ಹೇಳಬೇಕಾದುದರಲ್ಲಿ ದೃಷ್ಟಿಯನ್ನು ಹೆಚ್ಚಾಗಿಟ್ಟಿರುವನೇ ಹೊರತು, ಹೇಗೆ ಹೇಳಲಿ ಎಂದು ತಡವರಿಸಿದಂತೆ ತೋರುವುದಿಲ್ಲ. ಈ ಗುಣವನ್ನು ಹೆಚ್ಚಾಗಿ ಹೊಗಳಲಾರೆವು. ಓದುವವರೇ ತಿಳಿಯುವಂತೆ ಕೆಲವು ಭಾಗಗಳನ್ನು ಕೆಳಗೆ ಉದಾಹರಿಸುವೆವು:

ಬಗ್ಗಿಸೆಲೆ ಕೋಗಿಲೆ! ಏನೀ ಮಾಮರದ ಸೆಳೆಗೊಂಬಿನೊಳ್ ಮೂಗುವಟ್ಟಿರ್ಪಯ್?
ಕಣ್ಮರಲ್ ಕೆಂಪಾದುವೇಕೆ? ಏತರ್ಕೆ ಬೆಱಗುವಡುವಯ್? ಅರೆನುಡಿಯೊಳೆಂಬುದೇಂ?
ತಳಿರಿಲ್ಲಮೆಂಬೆಯ? ಅಲ್ತು; ಕಾಲಪುರುಷಂ ಜಡಭರಿತನೆಂಬೆಯ? ಅಂತದನಾರೊರೆದರ್?
ಇಂತಿದನಱಿತುಂ ಸೋಂಬನಾಗಿರ್ಪುದೊಳ್ಳಿತೆ? (ಶ್ರೀರಾಮಾಶ್ವಮೇಧಮ, ಪುಟ ೨)

(ಈಗಿನ ಕವಿಗಳು ಕನ್ನಡದಲ್ಲಿ ಅಕ್ಕರೆಪಡುವವರಿಲ್ಲವೆಂದು ಬಗೆದು ಹೆಚ್ಚಾಗಿ ಬರೆಯದೆ, ಹೆದರಿ, ಸೋಮಾರಿಗಳಾಗಿರುವರೆಂಬುದು ಇದನ್ನು ಓದಿದವರಿಗೆ ಯಾರಿಗೆ ಹೊಳೆಯದು?)

ಹಾ! ಲೋಕಾಪವಾದದೊಂದೆಟ್ಟರದ ಬಲ್ಮೆಯೇ! ಎಂತಪ್ಪರುಮಂ ಬಿಟ್ಟಿರಯೇ! ನಿನ್ನೀ
ದೂಸಱಿಂ ಮದುವೆನಿಂದ ಮಡದಿಯಂ ಬಿಟ್ಟಿರ್ಪುದಾಯ್ತು. ನಿಷ್ಕಳಂಕೆಯೆಂದಱಿಯೆನೇ?
ಪಾವನೆಯೆಂದಱಿಯೆನೆ? ಹಾ! ಹಾ! ಸೀತೆ! ಎನ್ನಂ ಕೈವಿಡಿವಿನಂ ನಿನಗೊದವಿದ
ಭಾಗ್ಯಮೇ! ಎನ್ನನೇ ವರಿಪೆನೆಂದಾವ ದೈವಮಂ ಮುಂ ನೋಂತೆಯೊ? ಅಕ್ಕಟಾ!
ಕೈವಿಡಿದಿನ್ನೆಬರಮೊಂದುದಿನಮಾದೊಡಂ ಸೊಗಮಂ ಕಂಡುದುಂಟೇ? ಎಳವೆ
ವನಸಂಚಾರದೊಳಾಯ್ತು; ಬಳವಿ ರಕ್ಕಸರ ಬಂದಿಯೊಳಾಯ್ತು; ಕೆೞವೆ ಪುಲಿಕರಡಿಗಳಿನ
ಗುರ್ವಿಸಿದ ಕಾರಡವಿಯೊಳಾಯ್ತಲೆ! ಅಯ್ಯೋ! ಅಬ್ಬೆಯಿಲ್ಲದ ಪೆಣ್ಮಗಳನೋರ್ವಳಂ
ಕಾಡಿಗೊತ್ತೆಗೀವೊಡೆಂದೇಂ ಮದುವೆನಿಂದೆನೇ?

(ಶ್ರೀ ರಾಮಾಶ್ವಮೇಧಂ, ಪುಟ ೫೧)

ಆಃ । ಮನುವಿನ ಮಾರ್ಗಂ, ಭಾನುವಿನ ತೇಜಂ, ತಕ್ಕಟೆಯದೆ ಬಟೆಸಲ್ವನನಿನಿತೊಂದು
ಪೆರ್ಮೆಗಡರ್ಪಾದನಕ್ಕುಂ ರಾಮಂ. ಏಂ ದೆಸೆದೆಸೆಯ ಬಾಟ್ಗೆಟ್ಟ ಕೀಟರಸುಗಳ್ ಖೋಡಿ
ಗಳಾಗರೆ? ತಾನೊರ್ವನೆ ಜಗಕ್ಕೆ ಗಂಡಂ, ಮಿಕ್ಕುೞಿದರಸುಗಳೆಲ್ಲರ್ ಬಾಂಬರೆಂದೆ ಬಗೆವಂ
ರಾಮಂ; ಅಲ್ಲದೊಡೇಂ ಕೊರ್ವೊ? ಏಂ ಪನ್ನತಿಕೆಯೊ? ಏಂ ಜಂಬಮೊ? ತಾಂ ಗಡ! ರಕ್ಕಸ
ವಗೆಯಂ ಗಡ! ಪಾತಕಂ ಗಡಂ! ಯಜ್ಞಂ ಗಡ! ಇಂತೊಂದು ನೆವದಿಂ ಪಣದಾಸೆಗೆ ಈ
ಹಸುವನಾಡಿಸಿ ಬೇಡಿಸಿ ಕೂಡಿಸುವ ಗಾರುಡಿಗತನಮಂ ಕಂಡೊರೆದ ಜೋಗಿಯೆ ಜಾಣಂ.
ಅಕ್ಕೆ, ಮೊನೆಯೊಳ್ ಗೆಲ್ವ ಬೀರರ್ ಬರ್ಕೆ, ಅನ್ನೆವರವೆಮ್ಮ ನಾಲೆಯೊಳ್ ಕೆಱುಕುಳದ
ಬಡವು ಕುದುರೆಗಳ ಸಾಲೊಳ್ ಕಟ್ಟುವೆಂ

(ಶ್ರೀ ರಾಮಾಶ್ವಮೇಧಂ, ಪುಟ೧೪೬)

ಇದುವರೆಗೆ ಮುದ್ದಣನ ಭಾಷೆ ಮತ್ತು ಶೈಲಿಗಳನ್ನು ಚರ್ಚಿಸಿದೆವು. ಮುಂದೆ ಆತನ ಕಥಾ ವಸ್ತುವನ್ನು ಕುರಿತು ಚರ್ಚಿಸುವೆವು. ರೀತಿಯಲ್ಲಿ ಹಿಂದಿನ ಕವಿಗಳ ಪಂಗಡಕ್ಕೆ ಸೇರದಂತೆಯೇ, ವಸ್ತುವಿನಲ್ಲಿಯೂ ಹಿಂದಿನವರ ಪಂಗಡಕ್ಕೆ ಸೇರುವುದಿಲ್ಲ. ಹಿಂದಿನ ಕವಿಗಳಲ್ಲಿ ಮುಖ್ಯ ದೋಷಗಳು ನಾಲ್ಕು; ತಮಗೆಯೇ ಹೊಳೆಯುವ ಹೊಸ ದಾರಿಗಳಲ್ಲಿ ಕಾಲಿಕ್ಕದೆ, ಹಿಂದಿನವರು ಹೋದ ಕಡೆಯೇ ಹೋಗಿ, ಅವರು ಹೇಳಿದುದನ್ನೇ ಹೇಳುವುದು; ಅಷ್ಟಾದಶವರ್ಣನೆ ಮೊದಲಾದವು ಇದ್ದೇ ತೀರಬೇಕೆಂಬ ಕಟ್ಟಳೆಗೆ ಕಟ್ಟುಬಿದ್ದಿರುವುದು; ಕೊಂಚವಾದರೂ ನಾಚಿಕೆಯಿಲ್ಲದೆ, ಹೊಲಸುವಿಷಯಗಳನ್ನು ವಿಸ್ತರಿಸುವುದು; ಕೆಲವು ಮಾತುಗಳಲ್ಲಿ ಸೊಗಸಾಗಿ ವರ್ಣಿಸದೆ, ನೊಂದ ಕರಡಿಯು ಒರಲುವಂತೆ, ಹನಿಹಾಕದ ಮೋಡವು ಗುಡುಗುವಂತೆ ವರ್ಣಿಸುವುದು. ಪಂಪ ಭಾರತ, ಸಾಳ್ವ ಭಾರತ, ಜಿನಭಾರತ, ನಾರಣಜಪ್ಪನ ಭಾರತ, ಪಂಪ ರಾಮಾಯಣ, ಕುಮುದೇಂದು ರಾಮಾಯಣ, ತೊರವೆಯ ರಾಮಾಯಣ, ಆನಂದ ರಾಮಾಯಣ, ಆದಿ ಪುರಾಣ, ಶಾಂತಿ ಪುರಾಣ, ಅಜಿತ ಪುರಾಣ, ಮಲ್ಲಿನಾಥಪುರಾಣ– ಎಲ್ಲಿ ನೋಡಿದರೂ ಒಂದೇ ಕಥೆ, ಒಂದೇ ರೀತಿ, ಒಂದೇ ರಗಳೆ. ಯಾವ ಉತ್ತಮ ಕಾವ್ಯವನ್ನು ನೋಡಿದರೂ ಸಮುದ್ರ, ದೇಶ, ನಗರ, ರಾಜ, ಮಂತ್ರಿ, ಋತುಗಳು, ಯುದ್ಧ, ಅರಣ್ಯ– ಇವುಗಳ ವರ್ಣನೆಯೇ; ಇವು ಸಾಲದೆ ಅಸಹ್ಯವನ್ನು ಹೆಚ್ಚಿಸುವುದಕ್ಕೆ ಜಲಕೇಳಿ ವರ್ಣನೆ, ಚಂದ್ರಿಕಾವಿಹಾರ ವರ್ಣನೆ, –ವರ್ಣನೆ. ಜಯನೃಪಕಾವ್ಯದಲ್ಲಿ ಸುಲೋಚನೆಯು ಹೇಗೆ ವರ್ಣಿಸಲ್ಪಟ್ಟಿರುವಳು ಬಲ್ಲಿರಾ? ಅದು ವರ್ಣನೆಯೋ ಹೆಣವನ್ನು ಕೊಯ್ಯುವ ವಿದ್ಯೆಯೋ ಕಾಣೆವು. ಆಕೆಯ ಕಾಲು, ಮೇಗಾಲು, ಕಾಲುಗುರು, ಕೈ, ಕೊರಲು, ಮುಖ, ಹಲ್ಲು, ತುಟಿ, ಕೆನ್ನೆ, ಮೂಗು, ಕಿವಿ, ಹುಬ್ಬು, ಹಣೆ, ಕುರುಳು, ತುರುಬು, ಬೆನ್ನು– ಇವುಗಳಿಗೆ ಒಂದೊಂದು ಪದ್ಯ; ತೊಡೆ ಬಾಸೆಗಳಿಗೆ ಎರಡೆರಡು; ನಡು, ಕಣ್ಣುಗಳಿಗೆ ಮೂರು ಮೂರು; ಇನ್ನು ನಾವು ಹೇಳಲು ನಾಚಿಕೆಯಾಗುವ ಅಂಗವರ್ಣನೆಗಳು, ಹೇರಳವಾಗಿ ಉಂಟು (೩–೨೧~೬೩). ಇಷ್ಟು ಸಾಲದೆ ೪ನೆಯ ಸಂಧಿ ೧೪~೪೨ ವರೆಗೆ ಸುಲೋಚನೆಯ ವಿರಹ ತಾಪವನ್ನೂ ೫ನೆಯ ಸಂಧಿ ೧~೨೪ರವರೆಗೆ ಆಕೆಯನ್ನು ಕೆಳದಿಯರು ಸಿಂಗರಿಸಿದುದನ್ನೂ ವರ್ಣಿಸಿರುವನು; ಬಿಡುವಿದ್ದವರು ಓದಿ ಆನಂದವನ್ನು ಹೊಂದಬಹುದು.

ನಮ್ಮ ಮುದ್ದಣನಲ್ಲಿ ಈ ಕೊರತೆಗಳು ಎಷ್ಟು ಮಟ್ಟಿಗುಂಟು? 'ರಾಮಾಶ್ವಮೇಧ'ದ ಕಥೆ ಹೊಸದೇನೂ ಅಲ್ಲ; ಕಥೆ ಹೊಸದಲ್ಲದಿದ್ದರೂ ತನ್ನದೇ ಒಂದು ಹೊಸ ದಾರಿಯಲ್ಲಿ, ಮಾರ್ಪಾಡುಗಳನ್ನು ಮಾಡಿ ಬರೆದೂ ಇಲ್ಲ; ನಮಗೆ ಇದೊಂದು ಕೊರತೆಯಾಗಿ ತೋರುವುದು; ಆದರೆ ಗಂಡ ಹೆಂಡಿರು ಮಾತನಾಡಿಕೊಳ್ಳುವ ಕಡೆಯಲ್ಲಿ ಹೊಸ ವಸ್ತುವೂ, ಹೊಸ ರೀತಿಯೂ ಇರುವುದೆಂದು ಮುಂದೆ ತೋರಿಸುವೆವು, ಕಥಾಭಾಗಗಳು ಈ ಹೊಸ ತೆರದಲ್ಲಿ ಬರೆಯಲ್ಪಡದಿದ್ದರೂ, ಹಿಂದಿನವರ ತೆರದಲ್ಲಿಯೇ ಬರೆಯಲ್ಪಟ್ಟಿವೆ ಎಂದು ಹೇಳಲಾಗುವುದಿಲ್ಲ; ಹೊಲಸು ವರ್ಣನೆಗಳು ಹುಡುಕಿದರೂ ಸಿಕ್ಕುವುದಿಲ್ಲ. ಕಥೆಗೆ ಬೇಕಾದ ವರ್ಣನೆಗಳು, ಹಾಳತವಾಗಿ, ಅಲ್ಲಲ್ಲಿಗೆ ತಕ್ಕಂತೆ ಬಂದಿರುವುದೇ ಹೊರತು ಅಷ್ಟಾದಶ ವರ್ಣನೆಗಳಿಗಾಗಿಯೇ ಕಥೆಯನ್ನು ಬರೆದ ಹಾಗಿಲ್ಲ. ಮಂಗಳಾಚರಣೆ, ದೇವತಾಸ್ತುತಿಗಳನ್ನು ಮಾಡಿ ಕಥೆಯನ್ನು ಮೊದಲು ಮಾಡದೆ, ಮಳೆಗಾಲವನ್ನು ವರ್ಣಿಸಿ, ಗ್ರಂಥಮಧ್ಯದಲ್ಲಿ ದೇವತಾಸ್ತುತಿಗಳನ್ನು ಅಡಗಿಸಿರುವನು;

ಸುವ್ವಿ! ಸುವ್ವಿ! ನಾಲ್ಮೊಗನಗ್ಗಿಟ್ಟಿಕೆಯೊಳೊಗೆದ ಒಳ್ನಗೆಯ ಮುದ್ದುಗುವರಿ! ಸುವ್ವಿ! ಸುವ್ವಿ! ಬೀಣೆ ಹೊತ್ತಗೆಗಳಂ ಪೊತ್ತ ಕೈಯ ಚೆಲ್ವೆ! ಸುವ್ವಿ! ಸುವ್ವಿ! ಬಾಣಿ. . .ನುಡಿಬಿನ್ನಣಮನೆನಗೆ ಕರುಣಿಸೌ! ನಿನಗೆಱಗುವೆಂ. ಸುವ್ವಿ! ಸುವ್ವಿ! ಆ! ಆ! ಆ! ಆ!!! (ಪುಟ ೧೦೧)

ನಾವು ಹಿಂದೆ ಹೇಳಿದಂತೆ ಹಿಂದಿನವರ ವರ್ಣನೆಯನ್ನು ನೋಡಿ ನಕ್ಕಿರುವನು:

"ಆ ಅಂದಿನ ರಗಳೆಯ ಬಣ್ಣನೆಯ ದಿನಂಗಳ್ ಪಿಂಚಿದುವು." (ಪುಟ ೯೬)

ಎಂದುಂ ಕಾಣದರೊಂದು ಪಾಂಗಿನಿಂ ಪೇಳ್ದ ಪೊಚ್ಚಱದ ನಿನ್ನೀ ಬಣ್ಣನೆಯ ನುಡಿಗೇ
ನೆಂಬೆನೊ! ಒಡಲಸಿದೇಂ? ಮೊಗದೊಳೇತರ ಸಸಿ? ಕಣ್ಣೊಳೇತರ ಪೂ? ನಡುವಿನೊಳೇಂ
ಪುಸಿ?. .. ನುಡಿನಿಱೆಗೆಯಂ ಬೆದಂಕಿ ಪಾರದಂತುಂ, ಇರ್ದಂತು ಬಣ್ಣಿಪೊಂದು ಜಾಣ್ಮೆ
ದೊರೆಕೊಳ್ವಂತುಂ, ವಾಕ್ಸಿದ್ಧಿಯಂ ಪಡೆವೆಂ. (ಪುಟ ೧೦)

ಕಥಾಭಾಗಗಳಿಗಿಂತಲೂ ನಡುವೆ ಸೇರಿರುವ ಗಂಡ ಹೆಂಡಿರ ಮಾತುಗಳು ಮನಸ್ಸನ್ನು ಹೆಚ್ಚಾಗಿ ಸೆರೆಗೊಳ್ಳುವವೆಂದು ಓದುವವರೆಲ್ಲರೂ ಒಪ್ಪಿಯೇ ತೀರಬೇಕು. ಇಲ್ಲಿ ಮುದ್ದಣನು ತನ್ನ ಬಗೆಯ ಬೆಡಗೆಲ್ಲವನ್ನೂ ಹೊರಪಡಿಸಿರುವನು. ಹೀಗೆ ನಡುವೆ ನಡುವೆ ಮಾತನಾಡುವುದನ್ನು ಹಿಂದೆಲ್ಲಿಯೂ ಕಂಡರಿಯೆವು. ಇಲ್ಲಿ ಹಿಂದಿನ ಕಟ್ಟಳೆಗಳಲ್ಲಿ ಸಿಕ್ಕಿ, ಬೋನಿನಲ್ಲಿ ಸಿಕ್ಕಿಬಿದ್ದ ಹುಲಿಯಂತೆ ಒದೆದಾಡದಿರುವುದರಿಂದ ಎಷ್ಟೋ ಸೊಗಸಾಗಿರುವುದು. ರೆಕ್ಕೆ ಬಲಿತ ಹಕ್ಕಿಯು ಪಂಜರದಲ್ಲಿ

ಕೂಡಲ್ಪಟ್ಟಾಗ ಹಾಡುವುದು ಸೊಗಸೊ? ತನಗೆ ತೋರಿದ ಹಾಗೆ ಹಾರಿ ಬಯಲಿನ ತಿಳಿಗಾಳಿಯನ್ನು ಕೊಂಡು ನಲಿದಾಡುವ ಹಕ್ಕಿಯ ಹಾಡು ಸೊಗಸೊ? ಕನ್ನಡದಲ್ಲಿ ಅಕ್ಕರೆಯುಳ್ಳ ಸೀತೆಯ ಸಂಕಟಗಳಲ್ಲಿ ಮನಸ್ಸನ್ನಿಟ್ಟು ಕೊರಗುವ ದೇವತೆಗಳು ತಪಸ್ವಿಗಳನ್ನು ಕೆಡಿಸಲು ತೊಡಗುವುದನ್ನು ಅಲ್ಲಗಳೆಯುವ, ಕಾಡು ಬೆಟ್ಟಗಳನ್ನು ಬಣ್ಣಿಸಲು ಕಥೆಯನ್ನು ಬಿಟ್ಟು ಓಡಿಹೋಗುವ ನಲ್ಲನನ್ನು ಹಿಂದಕ್ಕೆ ತರುವ, ಆತನು ಕಾಳಗವನ್ನು ಬಣ್ಣಿಸುತ್ತಿದ್ದರೆ ತೂಕಡಿಸುವಳಂತೆ ನಟಿಸುವ, ಮಂತ್ರತಂತ್ರ ಸಿದ್ಧಿಯಲ್ಲಿ ನಂಬಿಕೆಯಿಲ್ಲದ, ಆ ಮನೋರಮೆಯನ್ನು ನೋಡಿ ಯಾರಿಗೆ ಬೆಳ್ದಿಂಗಳಲ್ಲಿ ಹಾಲನ್ನವನ್ನು ಉಂಡಂತಾಗದು? ಆಕೆಯು ಹೇಳಿದುದಕ್ಕೆ ಇದಿರಾಗಿ ಹೇಳುತ್ತಲೂ, ಆಕೆಯನ್ನು ತಿಳಿಯದ ಹೆಂಗಸೆಂದು ಹೀಯಾಳಿಸುತ್ತಲೂ ಆಕೆಯನ್ನು ರೇಗಿಸಿ ಒಳಗೆಯೇ ಸಂತೋಷಪಡುವ ಮುದ್ದಣನನ್ನು ನೋಡಿ ಯಾರು ಮೆಚ್ಚರು? ಇವರ ಸರಸವು ಹೊಗಳಲ್ಪಡಲುತಕ್ಕುದು. "ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀಮಂತ್ರವು" ಯಾವುದೆಂದು ಕೇಳಿದ ಮನೋರಮೆಯಿಂದ, ಮರೆತಾದರೂ ಹೆರರಿಗೆ ಗುಟ್ಟನ್ನು ಬಿಡಕೂಡದೆಂದು, "ನಂಬುಗೈಯಂ ಪೊಯ್ಸಿಕೊಂಡು", ಕಿವಿಯಲ್ಲಿ "ಭವತಿ ಭಿಕ್ಷಾಂದೇಹಿ" ಎಂದು ಹೇಳಿದುದನ್ನು (ಪುಟ ೧೩೪-೩೮) ಮನೋರಮೆಯು ನೋಂಪಿಯನ್ನು ಮಾಡಬೇಕೆಂದಾಗ "ಹೂರಣಗಡುಬು, ಸೆಂಡಿಗೆ, ಮಂಡಿಗೆ, ಹೋಳಿಗೆಗಳು" ಸಿಕ್ಕುವುವೆಂದು ಒಪ್ಪಿ, ಮುಂದೆ "ಪೊತ್ತಿಡೆವಿಡಿದು ಬೈಗುವರೆಗಮುಪವಾಸ ಮಿರಲೇವೇಳ್ಪುದು" ಎಂದ ಕೂಡಲೇ, (ಬೆಡಗುಗೊಂಡು) "ಅಂತಪ್ಪೊಡೀ ನೋಂಪಿಯನೊಲ್ಲೆಂ" ಎಂದು ಹೇಳಿದುದನ್ನೂ (ಪುಟ ೧೫೪- ೫೭) ಕೇಳಿ ಹೊಟ್ಟೆ ಹುಣ್ಣಾಗದಂತೆ ನಕ್ಕು ನಿಲ್ಲಿಸುವುದಕ್ಕಾಗುವುದೇ? ತನ್ನನ್ನು ರತಿಯಾಗಿ ಬಗೆದು ಬಣ್ಣಿಸೆಂದ ನಲ್ಲಳೊಡನೆ ಸರಸವಾಡುವುದನ್ನು ನೋಡಿ:

ಮುದ್ದಣ : ಕೇಳ್, ಆಂ ಬಣ್ಣಿಪ ರತಿಗೆ ಮಿಂದ ಮರಗೂಟನೊಂದು ಮೆಯ್ವೊಗರ್.

ಮನೋರಮೆ: ಮರಗೂಟನೆಂದೊಡಾರ್?

ಮು : ದೆಸೆವಳರೊಳೊರ್ವಂ.

ಮ : ಉಂ. ಹುಂ.

ಮು : ಸಿಂಗರದ ಮಲೆನಾಡಿಗನೊಂದು ಭಂಗಿಯ ಮೊಗಂ.

ಮ : ಮಲೆನಾಡಿಗನೆಂದೊಡಾವಂ?

ಮು : ಮಲೆಯೊಳೆ ನೆಲೆಗೊಂಡಿರ್ಪ ನಾಲ್ಗೈಯ ದೇವರ್.

ಮ : ಇಂತಪ್ಪ ದೇವರೊಲ್ಮೆವಡೆದ ಮಲೆನಾಡ ಪೆಣ್ಗಳ್ ಕಣ್ಗೆ ಚೆಲ್ವೆಯರಾದರಕ್ಕುಂ?

ಮು : ಅಪ್ಪುದು. ಮತ್ತಮಾ ನೀಱೆಗೆ ಇರುಳ್ಗಣ್ಣಂಗೆಂತಂತೊಪ್ಪುವ ಬಟ್ಟನುಣ್ಗಣ್.

ಮ : ಇರುಳ್ಗಣ್ಣನೆಂದೊಡೆ ಆವ ಸೈಪುಳ್ಳಂ?

ಮು : ಇರುಳ್ಗಣ್ಣನೆಂದು ಚೆಂದವನಕ್ಕುಂ. (ಪುಟ ೧೦೩- ೧೦೪)

ನಾವು ಮುಗಿಸುವುದಕ್ಕೆ ಮುಂಚೆ ಮತ್ತೊಂದು ಮಾತು. ಸೀತೆಯು ಪಾವನೆಯೆಂದು ತಿಳಿದೂ ರಾಮನು, ಸರಿ ತಪ್ಪೆಂದು ನೋಡದೆ ತನಗೆ ತೋರಿದಂತೆ ಹರಟಿದ ಒಬ್ಬ ಅಗಸನ ದೂರಿಗೆ ಹೆದರಿ, ಆಕೆಯನ್ನು ಕಾಡಿಗೆ ಕಳಿಸಿದನಷ್ಟೆ.. ಈ ವಿಷಯದಲ್ಲಿ ನಮ್ಮ ಮನೋರಮೆಯು ಹೇಳುವುದನ್ನು ಕೇಳೋಣ:

ಮುದ್ದಣ : ಸೀತಾರಾಮಂ ತನ್ನ ಬಿರ್ದಿನ. . .

ಮನೋರಮೆ : ನಲ್ಲ! ಏವಾತೋ? ಸೀತೆಯನಂತುಮಿದುಮೇತಱ ಸೀತಾರಾಮಂ? ಪೋ, ಮಾಣ್!

ಅವಂಗಿನ್ನೆತ್ತಣ ಸೀತೆ? ಅಪ್ಪೊಡಿನ್ನಾಕಲ್ಲೆರ್ದೆಯಂ ರಾಮನೊ ಭೀಮನೊ? ಏಂ?

ಮು : ಎನ್ನ ಕೈಗಳಸಮೆ! ಇಂತುಮೆಂಬರೆ? ಶ್ರೀರಾಮಂ ಕಲ್ಲೆರ್ದೆಯನೆ? ಆಃ!
ಬಟೆಕ್ಕಮಾತನ ಪ್ರಳಾಪಮಂ ನೀ ಕೇಳ್ದುದಿಲ್ಲಂ

ಮ : ಏಂ, ತಾನೆ ತಲೆವೊಯ್ದುಂ ಮಱುಗಿದನೆ?

ಮು : ರಾಮಂ, ತಲೆವೊಯ್ದನೇಂ? ತಾಂ ಯಶೋಧನನಪ್ಪಿನಂ ಲೋಕಾಪವಾದ
ಭೀತಿಗಡವಿಗಟ್ಟಿದನಲ್ಲದರಸಿಯೊಳೇಂ ಪಗೆಯೆ?

ಮ : ಪಗೆಯೇಂ, ನಗೆಯೇಂ? ಬಡವೆಯೊರ್ವಳ್ ಕಾಡಿಂಗಾದಳ್ಕೈಸೆ!

ಮು : ಇಂತಿದನೆ ನೆನೆನೆನೆದಟುಂಬಂ ಪಲುಂಬಿದಂ.

ಮ : ಏಂ, ತನಗೆ ಪೆಱಿರ್ ಪೆಂಡಿರಿಲ್ಲೆಂದೆಯೆ? (ಪುಟ ೫೦)

ಈಗಲೂ ರಾಮನು ಮಾಡಿದುದು ಸರಿಯೆಂದು ಹೊಗಳುವವರು ಹಲವರಿರುವಲ್ಲಿ, ಮನೋರಮೆಯು ಹೀಗೆ ಹೇಳುವಂತೆ ಬರೆದಿರುವುದನ್ನು ನೋಡಿ ಬೆರಗಾಗದೆ ಇರುವುದೆಂತು? ಈ ಗ್ರಂಥದ ಕೊನೆಯಲ್ಲಿರುವ ಪದ್ಯವನ್ನು ನೋಡಿ ನಮ್ಮ ಬೆರಗು ಹೆಚ್ಚದಿರುವುದೆಂತು?

ಧರೆಯಜೆಯ ಜೀವರಾಶಿಗೆ
ಪಿರಿಯಂ ನರನಾದಮಾದನಾತ್ಮಂ ತನ್ನೊಳ್
ದೊರೆಕೊಂಡಿರ್ಪಿನಮಂತದು
ಪರಿನಿರ್ಮಲಮಾಗೆ ಪೆರ್ಮೆಯಿರ್ಮೆಯ್ವಡೆಗುಂ

['ಸುವಾಸಿನಿ' ಪತ್ರಿಕೆಯ ಡಿಸೆಂಬರ್ ೧೯೦೨ರ, ೨ನೆಯ ಸಂಪುಟದಲ್ಲಿ ಮುದ್ರಿತವಾದ ಲೇಖನ; ಇದನ್ನು ಎಂ.ಎನ್.ಎಸ್. ಅವರ ಜೊತೆಗೂಡಿ ಬರೆಯಲಾಗಿದೆ.]

ಮಾಸ್ತಿಯವರನ್ನು ಕುರಿತು

ಅಧ್ಯಕ್ಷರೇ, ತಾಯಿಯರೇ, ಹಿರಿಯರೇ, ಕಿರಿಯರೇ, ಮಕ್ಕಳೇ–

ಈ ದಿವಸದ ಸಂತೋಷದ ಸಮಾರಂಭಗಳನ್ನು ನಡಸಿಕೊಡಬೇಕೆಂದು ಮದರಾಸು ಪ್ರಾಂತ್ಯದ ಮಂತ್ರಿವರ್ಯರಾಗಿದ್ದ ಶ್ರೀ ರಾಜಗೋಪಾಲಾಚಾರ್ಯರನ್ನು ಪ್ರಾರ್ಥಿಸಿದ್ದೆವು. ಆದರೆ ಕಾರ್ಯಗೌರವದ ದೆಸೆಯಿಂದ ಅವರು ಬರಲು ಸಾಧ್ಯವಾಗದೆ ಕೊನೆಯ ಗಳಿಗೆಯಲ್ಲಿ ನಾನು ನಿಂತು ಈ ಕೆಲಸದ ಭಾಗವನ್ನು ವಹಿಸಬೇಕಾಗಿದೆ.

ಈ ಕೆಲಸವನ್ನು ಮಾಡುತ್ತಿರುವ ನನಗೆ ದೊಡ್ಡ ಆನಂದವಾಗಿದೆ ಎಂದು ನಾನು ತಮ್ಮಲ್ಲಿ ಹೇಳಬೇಕಾದ ಅವಶ್ಯಕತೆಯೇ ಇಲ್ಲ. ಆದರೆ ಈ ಆನಂದದ ಬಿಗಿತದಲ್ಲಿ ಕೊರಳು ಸೆರೆಹಿಡಿದು ಏನು ಮಾತನಾಡಬೇಕೆಂಬುದೇ ತೋಚದಾಗಿದೆ. ಈ ಭಾವಚಿತ್ರದ ಮೂಲರಾದ ವೆಂಕಟೇಶ ಅಯ್ಯಂಗಾರ್ಯರು ಅಂದರೆ ಶ್ರೀನಿವಾಸರವರು, ಅಂದರೆ ಮಾಸ್ತಿಯವರ ವಿಷಯವಾಗಿ ನಾನು ಏನು ಹೇಳಲಿ? ಕನ್ನಡ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ, ಆಕೆಯ ಪ್ರೇಮದ ಆಶೀರ್ವಾದವನ್ನು ಪಡೆದು, ಆಕೆಯ ಸೇವೆಯನ್ನು ಅತ್ಯಂತ ಉತ್ಸಾಹಶ್ರದ್ಧೆಗಳಿಂದ ಮಾಡುತ್ತಿರುವ ನಮ್ಮ ಮಾಸ್ತಿಯವರ ವಿಷಯವಾಗಿ ಯೋಗ್ಯವಾಗಿ ನಾನು ಏನು ಹೇಳಬೇಕೆಂಬುದೇ ತೋಚದಾಗಿದೆ. ನಮ್ಮ ಶ್ರೀನಿವಾಸರ ಎದುರಿಗೇ ನನ್ನ ಮನಸ್ಸನ್ನು ಒಂದೆರಡು ಮಾತುಗಳಲ್ಲಿ ಮುಚ್ಚುಮರೆಯಿಲ್ಲದೆ ಆಡಬೇಕಾಗಿ ಬಂದದ್ದಕ್ಕೆ ನನಗೆ ಸ್ವಲ್ಪ ಸಂಕೋಚವೂ ಆಗುತ್ತಿದೆ.

ಮಾಸ್ತಿಯವರು ಕನ್ನಡನಾಡಿನ ಪ್ರೇಮಪುತ್ತಳಿ. ಅವರ ನಯ, ಅವರ ನಗೆ, ಅವರ ಶೈಲಿ, ಅವರ ನಿಷ್ಠೆ, ಅವರ ದೊಡ್ಡದೃಷ್ಟಿ, ಎಲ್ಲರನ್ನು ಸರಿಮಾಡಿಕೊಂಡು, ಎಲ್ಲರಿಗೂ ಸರಿಯಾಗಿದ್ದುಕೊಂಡು, ಎಲ್ಲರಲ್ಲಿಯೂ ಗುಣವನ್ನು ಕಂಡುಕೊಂಡು, ಕನ್ನಡಿಗರೆಲ್ಲರೂ ತಮ್ಮ ಮನೆಯವರೆಂಬಂತೆ ಹೊಂದಿಕೊಂಡು, ಕನ್ನಡನಾಡನ್ನು ಸುತ್ತಿ, ಕನ್ನಡಿಗರನ್ನೆಲ್ಲಾ ನೋಡಿ ತಿಳಿದು, ಪ್ರತಿಯೊಬ್ಬರ ರಹಸ್ಯವನ್ನೂ ಅರಿತುಕೊಂಡು, ಕನ್ನಡನಾಡಿನ, ಕನ್ನಡ ನುಡಿಯ ಶಕ್ತಿಯನ್ನೂ ತಿಳಿದು, ನಮ್ಮ ನಾಡು ಮೊದಲಿನಂತೆಯೇ ಸೊಬಗಿನ ಬೀಡಾಗಿ ಶಕ್ತಿಯಿಂದ ತುಂಬಿತುಳುಕುವಂತಾಗಲೆಂದು ಹಾರೈಸುತ್ತಾ, ಹಗಲೂ ಇರುಳೂ ಅವರು ನುಡಿಯ ಸೇವೆಯನ್ನು ಮಾಡುತ್ತಿರುವುದನ್ನು ನಾನು ಹೊಸದಾಗಿ ತಿಳಿಸಬೇಕಾಗಿಲ್ಲ. ನಮ್ಮ ನುಡಿ, ನಮ್ಮ ನಾಡು, ನಮ್ಮ ಹಿಂದಿನ ಹಿರಿಮೆ, ನಮ್ಮ ಸಂಸ್ಕೃತಿ ಇದುವರೆಗೂ ಯಾವ ನವಿರಿನಿಂದ ಬಂದಿತು. ನಮ್ಮಲ್ಲಿ ವಿಶ್ವವ್ಯಾಪಕದೃಷ್ಟಿಯ ಬೆಳವಣಿಗೆಯಿಂದ ಸಾಹಿತ್ಯದ ಮೇಲೆಯೂ ಪರಿಣಾಮವಾಯಿತು, ಇವೇ ಮೊದಲಾದ ವಿಷಯಗಳನ್ನು ಕುರಿತು ಅವರೊಡನೆ ಮಾತನಾಡುವುದೇ ಒಂದು ಸೊಗಸು. ಅವರು ತಮಿಳು, ಇಂಗ್ಲಿಷು, ಸಂಸ್ಕೃತ ಮೊದಲಾದ ಹೊರಸಾಹಿತ್ಯಗಳ ಒಳಹೊಕ್ಕು ಆ ಸಾಹಿತ್ಯಗಳಲ್ಲಿ ಕಂಡುಬರುವ ಸುಖವನ್ನು, ಶಕ್ತಿಯನ್ನು, ಮೇಲ್ಮೆಯನ್ನು, ಸೌಂದರ್ಯವನ್ನು ಕನ್ನಡಸಾಹಿತ್ಯದಲ್ಲಿಯೂ, ಕಂಡುಕೊಂಡು ನಮ್ಮ ನುಡಿಯಲ್ಲಿಯೂ, ನಮ್ಮ ಸಂಸ್ಕೃತಿಯಲ್ಲೂ ಶಕ್ತಿಯುಂಟು, ತೇಜಸ್ಸುಂಟು ಎಂಬುದನ್ನು ಹೆಮ್ಮೆಯಿಂದ ಜನರಿಗೆ ತೋರಿಸಿಕೊಡುತ್ತಿದಾರೆ, ಶ್ರೀನಿವಾಸರು ನಮ್ಮ ನಾಡಿಗೇ ಹೆಮ್ಮೆಯಾಗಿರುತ್ತಾರೆ. ಮಾಸ್ತಿಯವರ ನಡೆ ನುಡುಗಳನ್ನು ನೋಡಿದಾಗೆಲ್ಲಾ ಅವರು ನನಗೆ ಇಬ್ಬರು ಇಂಗ್ಲಿಷು ಕೃತಿಕಾರರನ್ನು ನನ್ನ ನೆನಪಿಗೆ ತರುತ್ತಾರೆ. ಅವರನ್ನು ಒಂದು ರೀತಿ ಹೊಗಳುವುದಕ್ಕಾಗಿ ನಾನು ಈ ರೀತಿ ಹೇಳುತ್ತಿಲ್ಲ. ಮೊದಲನೆಯದಾಗಿ ಷೇಕ್ಸಪಿಯರ್ ಕವಿ. ಯಾವ ಒಂದು ರೀತಿಯಲ್ಲಿಯೂ ಯಾರಿಗೂ ಸುಳಿವು ಕಾಣಿಸಿಕೊಳ್ಳದೇ, ದೊಡ್ಡ ಹೃದಯವನ್ನು ಬೆಳೆಯಿಸಿ, ತನ್ನಲ್ಲಿ ಅಖಂಡ ಸತ್ಯವನ್ನು ಕಂಡುಕೊಂಡು, ವಿಶ್ವದಲ್ಲಿಯೂ ಅದೇ ಅಖಂಡ ಸತ್ಯವನ್ನು ಕಂಡು ಜನಗಳಿಗೆ ಸರಳವಾದ, ನಯವಾದ, ಸುಖವಾದ ರೀತಿಯಲ್ಲಿ ತನ್ನ ಭಾವನೆಗಳನ್ನು ತಿಳಿಸಿ ಜನರ ಮಧ್ಯೆ ತಾನು ಓಡಾಡುವಾಗ, ಇವನು

ನಿಜವಾಗಿಯೂ ದೊಡ್ಡ ಬರಹಗಾರನೇ ಎಂದು ಕೆಲವರಿಗೆ ಸಂದೇಹ ಬರುವಂತೆ ಜೀವಿಸಿದ್ದ ಆ ಮಹಾಕವಿ. ನಾವು ಆಕ್ಸ್‌ಫರ್ಡ್ ಕೇಂಬ್ರಿಡ್ಜ್ ಎಂ. ಎ. ಪರೀಕ್ಷೆಗಳನ್ನು ಮಾಡಿರುತ್ತೇವೆ. ಅವನು ಏನು ಮಾಡಿರುತ್ತಾನೆ? ಅವನು ನಮಗಿಂತ ಬುದ್ಧಿವಂತನೇ ಎಂದೂ ಸಹ ಅವನ ಕುಲದವರು ಅನ್ನುತ್ತಿದ್ದರೋ ಏನೋ. ಆದರೆ, ದಿನಗಳು ಕಳೆದ ಹಾಗೆಲ್ಲಾ, ಜನರು ಅವನ ಕವಿತೆಯನ್ನು ಓದಿದ ಹಾಗೆಲ್ಲಾ ಅವನ ಆಳ, ಅವನ ಹೃದಯದ ಘನತೆ, ಅವನ ಭಾಷೆಯ ಸರಣಿ, ಅವನ ಕವಿತೆಯ ಸೌಂದರ್ಯ, ಅಡಕವಾಗಿರುವ ಭಾವಗಳು, ಇವೆಲ್ಲಾ ಜನರಿಗೆ ಗೋಚರವಾಗಿ ಇಂದು ಕೃತಿಕಾರನೆಂದರೆ ಅವನೇ ಎನ್ನುತ್ತಿದೇವೆ. ಮಾಸ್ತಿಯವರು ಷೇಕ್ಸ್‌ಪಿಯರ್ ಕವಿಗೆ ಸಮಾನರೆಂದು ನಾನು ಹೇಳುತ್ತಿಲ್ಲ. ಆದರೆ ಇವರ ಕವಿತೆಗಳಲ್ಲಿ ಷೇಕ್ಸ್‌ಪಿಯರ್ ಕವಿಹೃದಯವನ್ನು, ರೀತಿಯನ್ನು ನಾವು ಕಾಣಬಹುದು. ಇನ್ನೊಬ್ಬ ಕವಿ, ನನಗೆ ಬಹು ಪ್ರಿಯನಾದ ಮಾಥ್ಯೂ ಆರ್ನಾಲ್ಡ್. ಅವನ ಮಾತುಗಳೆಂದರೆ ಸಂಸ್ಕೃತಿಯ ಹಾಡು (Culture).ಅವನ ಕವಿತೆಗಳನ್ನು ಓದುವಾಗ ಜೀವನದ ಇಂಪು, (Sweetness and Light) ಬೆಳಕು ಇವುಗಳು ಮೂರ್ತಿಮತ್ತಾಗಿ ನಮ್ಮ ಕಣ್ಣೆದುರಿನಲ್ಲಿ ಸುಳಿಯುತ್ತವೆ. ನಮ್ಮ ಶ್ರೀನಿವಾಸರ ಕವಿತೆಯಲ್ಲಿಯೂ ನಾವು ನಮ್ಮ ನಾಡಿನ ಸಂಸ್ಕೃತಿ, ನಮ್ಮ ನಾಡಿನ ಜೀವನದ ಮಾಧುರ್ಯವನ್ನೂ ಬೆಳಕನ್ನೂ ನೋಡುತ್ತೇವೆ. ಶ್ರೀನಿವಾಸರದು ವಿಶ್ವದೃಷ್ಟಿ. ಅವರ ಅಂತರಂಗ ಬಹಳ ದೊಡ್ಡ ಕ್ಷೇತ್ರದಲ್ಲಿ ನಡೆದುಕೊಂಡು ಹೋಗುತ್ತದೆ. ಈ ದಿನ ಕುಮಾರವ್ಯಾಸ, ನಾಳೆ ವಾಲ್ಮೀಕಿ, ನಾಳಿದ್ದು ಪುರಂದರದಾಸರು, ಆಳ್ವಾರುಗಳು ಇಂತಹ ಮಹಾನುಭಾವರ ಹೃದಯದ ಆಳವನ್ನು ತಿಳಿದು ಆನಂದಿಸುವರು. ಇನ್ನೊಮ್ಮೆ ಮಹಾಕವಿ ಗಯತೆ, ಮಾರ್ಕಸ್ ಅರಿಲಿಯಸ್ ಏನು ಹೇಳುತ್ತಾನೆಂದು ನೋಡುವುದು. ಅಗಸ್ಟಿನ್, ಡೇವಿಡ್ ಇವರ ಜೀವನಸ್ವಾರಸ್ಯವನ್ನು ಸಾರುವುದು. ಇತರ ಸಾಹಿತ್ಯಗಳ ವ್ಯಾಸಂಗದಿಂದ ತನಗುಂಟಾದ ಅನುಭವ ನಮ್ಮ ನಾಡಿನವರಿಗೂ ಆಗಲೆಂದು ಮುದ್ದಾದ ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುತ್ತಿದಾರೆ. ಅವರು ಚಿಕ್ಕವರಿಗೆ ಚಿಕ್ಕವರು, ದೊಡ್ಡವರಿಗೂ ಚಿಕ್ಕವರು. ಇವರ ಹೃದಯವು ಬಹು ವಿಶಾಲವಾದುದು. ಇತರ ದೇಶಗಳವರನ್ನು ನೋಡಿ ನಾವು ಕಲಿಯಬೇಕಾದುದೇನಿದೆ, ಇತರರನ್ನು ಬೇಡತಕ್ಕದ್ದೇನಿದೆ, ಎಲ್ಲವೂ ನಮ್ಮಲ್ಲಿಯೇ ಇದೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ಮಾಸ್ತಿಯವರು ಹಾಗಿಲ್ಲ. ಗುಣ ಎಲ್ಲಿಯೇ ಇರಲಿ, ಯಾರಲ್ಲಿಯೇ ಇರಲಿ, ಅದನ್ನು ಸೆಳೆದು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ.

ಕೆಲವು ಕಾಲದ ಹಿಂದೆ ಕನ್ನಡದಲ್ಲಿ ಬರಹಗಾರನ ಪಾಡು ಸ್ವಲ್ಪ ಕಷ್ಟವೇ ಆಗಿದ್ದಿತು. ಕನ್ನಡ ಭಾಷೆಯ ಭವಿಷ್ಯದಲ್ಲಿ ಜನರಿಗೆ ಸ್ವಲ್ಪ ಅವಿಶ್ವಾಸವೂ ಸಹ ಉಂಟಾಗಿದ್ದಿತು. ಆದರೆ ಇಂದು ಆ ಭೀತಿಯಿಲ್ಲ. ಕನ್ನಡನುಡಿಯ ಸೇವೆ ಮಾಡಲು ಹಲವರು ಮುಂದೆ ಬರುತ್ತಿದಾರೆ. ಮಾಸ್ತಿಯವರಂತೂ ಕನ್ನಡನುಡಿಗೆ ಪ್ರಾಶಸ್ತ್ಯವೇ ಇಲ್ಲದ ಕಾಲದಲ್ಲಿಯೇ ಪುಸ್ತಕಗಳನ್ನು ಬರೆಯತೊಡಗಿದ್ದರು. ಕನ್ನಡ ನಾಡನ್ನು ಹಿಂದೆ ಆವರಿಸಿದ್ದ ಕತ್ತಲೆ ಈಗ ಬೆಳದಿಂಗಳಾಗಿದೆ. ಕನ್ನಡದ ಜನ ತನ್ನ ಶಕ್ತಿಯನ್ನರಿತು ಕೊಂಡಿದೆ. ಮಾಸ್ತಿಯವರು ರಚಿಸಿರುವ ಕಾವ್ಯಗಳು, ಅವುಗಳ ಸೊಗಸು, ಅವರ ಪ್ರತಿಭೆ– ಈ ವಿಷಯವಾಗಿ ನನಗಿಂತಲೂ ಎಳೆಯ ಕಣ್ಣಿನವರು, ಹೊಸ ಕಣ್ಣಿನವರು ಹಲವರು, ವಿದ್ವನ್ಮಣಿಗಳು ಈ ದಿನ ಮಾತನಾಡತಕ್ಕವರಿದ್ದಾರೆ. ನಾನು ಆ ವಿಷಯವನ್ನು ಹೆಚ್ಚು ಪ್ರಸ್ತಾಪಿಸುವುದಿಲ್ಲ. ಆದರೆ ಇನ್ನೊಂದು ಮಾತನ್ನು ಹೇಳಿ ಈ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ.

ಇಷ್ಟೊಂದು ಕೃತಿಗಳನ್ನು ರಚಿಸಲು ನೀವು ಹೊತ್ತನ್ನು ಎಲ್ಲಿಂದ ತರುತ್ತೀರಿ ಎಂದು ನಾನು ಮಾಸ್ತಿಯವರನ್ನು ಆಗಾಗ ಕೇಳುತ್ತಿರುತ್ತೇನೆ. ಅವರೇನೂ ಪುಸ್ತಕ ಪಿಶಾಚಿಗಳಲ್ಲ. ಮನೆಯಲ್ಲಿ ಮಕ್ಕಳೊಡನೆ ವಿನೋದವಾಗಿ ಬೇಕಾದಷ್ಟು ಹೊತ್ತು ಕಾಲವನ್ನು ಕಳೆಯುತ್ತಾರೆ. ಹೊರಕ್ಕೆ ಬಂದರೆ ಸ್ನೇಹಿತರು. ಎಲ್ಲರೊಡನೆಯೂ ಸರಸ. ಯಾರಿಗೆ ಬೇಕಾದರೂ ತಮ್ಮ ಅಮೂಲ್ಯವಾದ ಸಲಹೆಯನ್ನು ಕೊಟ್ಟು ಅವರ ಸುಖದಲ್ಲಿ ತಾವೂ ಸಂತೋಷಪಡತಕ್ಕವರು, ಅವರು. ನಾವಾರಾದರೂ ಬಾಗಿಲ ಬಳಿ ಸಿಕ್ಕಿದರೆ ಸಾಕು. ಮೆಲ್ಲಗೆ ಮಾತನಾಡಿಸುತ್ತಾ ಮಹಡಿಯ ಮೇಲಕ್ಕೆ ಹತ್ತಿಸಿ, ಅಲ್ಲಿ ಕಾಫಿ, ಮಾತುಕತೆಗಳಾದ ನಂತರ ನಾವು ಕೆಳಗಿಳಿದು ಬರುವುದರಲ್ಲಿ ಯಾವುದೋ ಮಾಯದಲ್ಲಿ ಅವರ ಮೋಟಾರು ಕಾರು ಬಂದು ನಮ್ಮನ್ನು ಮನೆಗೆ ತೆಗೆದುಕೊಂಡು ಹೋಗಲು ಸಿದ್ಧವಾಗಿ ನಿಂತಿರುತ್ತದೆ. ಇವರು ತಮ್ಮ ಕಾಲವನ್ನು ಅನೇಕರಿಗೆ ಕೊಡತಕ್ಕವರು. ಅಲ್ಲದೆ ಸರ್ಕಾರದಲ್ಲಿ ಬಹಳ ಜವಾಬ್ದಾರಿಯ ಅಧಿಕಾರ ಸ್ಥಾನದಲ್ಲಿದ್ದಾರೆ. ಸರ್ಕಾರೀ ಕೆಲಸಕಾರ್ಯಗಳು, ಸ್ನೇಹಿತರೊಡನೆ ಮಾತುಕತೆಗಳು. ಇವುಗಳ ಜೊತೆಗೆ ಪುಸ್ತಕವನ್ನು ಓದುವುದಕ್ಕೆ ಬರೆಯುವುದಕ್ಕೆ ಇವರಿಗೆ ಕಾಲವೆಲ್ಲಿದೆ ಎಂದು ನಾನು ಯೋಚಿಸುತ್ತೇನೆ. ಇವರು ಗ್ರಂಥಗಳನ್ನು ಯಾವ ಮಾಯದಲ್ಲಿಯೋ ರಚಿಸಿಬಿಡುತ್ತಾರೆ. ಹೆಂಗಸರು ಸಾಮಾನ್ಯವಾಗಿ ವರ್ಷಕ್ಕೆ ಒಂದು ಮಗುವನ್ನು ಹೆರುತ್ತಾರೆ. ಕೆಲವರು ವರ್ಷಕ್ಕೆ ಎರಡು ಮಕ್ಕಳನ್ನು ಹೆರಬಹುದು. ಪ್ರತಿ ವರ್ಷವೂ ನೀವು ಎರಡು ಮಕ್ಕಳನ್ನು ಹೆರುತ್ತಿದ್ದೀರಲ್ಲಾ ಎಂದು ನಾನು ಇವರನ್ನುಆಗಾಗ ಹಾಸ್ಯಮಾಡುತ್ತೇನೆ. ಷೇಕ್ಸ್‌ಪಿಯರ್ ವರ್ಷಕ್ಕೆ ಒಂದು ಎರಡು ನಾಟಕವನ್ನು ಬರೆಯುತ್ತಿದ್ದನಂತೆ. ಈ ಮಹಾರಾಯರು ವರ್ಷಕ್ಕೆರಡು ಪುಸ್ತಕಗಳನ್ನು ಅದು ಹೇಗೆ ಬರೆಯುತ್ತಾರೆಯೋ ನಾನು ಬೇರೆ ಕಾಣೆ. ಒಂದು ಬಗೆಯ ಕೃತಿಗಳಲ್ಲ, ಎಲ್ಲಾಬಗೆಯವು. ಸಣ್ಣಕಥೆ, ಸಣ್ಣನಾಟಕ, ವಿಮರ್ಶೆ, ಸಣ್ಣಗೀತೆಗಳು,

ಪದಗಳು, ದೊಡ್ಡ ಕಾವ್ಯಗಳು, ದೊಡ್ಡವರ ಜೀವನಚರಿತ್ರೆಗಳು, ಪ್ರತಿಯೊಂದು ರಚನೆಯಲ್ಲಿಯೂ ಭಾವಗಳು ತುಂಬಿ ತುಳುಕುತ್ತವೆ; ಸರಳ ಶೈಲಿ ಹರಿದುಹೋಗುತ್ತದೆ.

ಇವರಿಗೆ ಹಿರಿಯರ ಮಾತು ಎಂದರೆ ಬಹು ಗೌರವ. ಯಾವ ಕೆಲಸಕ್ಕೇ ಆಗಲಿ, ಇವರು ಮುಂದೆ ನುಗ್ಗುತ್ತಾರೆ. ಎಲ್ಲರನ್ನೂ ಪ್ರೀತಿಯಿಂದ ಕಂಡು ಎಲ್ಲರ ಪ್ರೀತಿಯನ್ನು ಗಳಿಸಿರುತ್ತಾರೆ. ಇಂದು ನಮ್ಮ ನಾಡಿನಲ್ಲಿ ಇವರನ್ನು ಪ್ರೀತಿಸುವವರು ಅಸಂಖ್ಯಾತ ಮಂದಿ. ಮಾಸ್ತಿಯವರು, ಕನ್ನಡನಾಡು ಬೆಳೆಯ ಬೇಕು, ಕನ್ನಡನುಡಿ ಬೆಳೆಯಬೇಕು, ಕನ್ನಡಿಗರ ಸಂಘಟನೆಯಾಗಬೇಕು ಎಂದು ತಮ್ಮ ತನುಮನಧನಗಳನ್ನು ತೆತ್ತು ಕನ್ನಡಕ್ಕಾಗಿ ನಿರಂತರವೂ ದುಡಿಯುತ್ತಿದಾರೆ. ಹೋದವರ್ಷ ತಾನೇ ಒಂದು ರೂಪಕ್ಕೆ ಬಂದ ಈ ಸಂಘದ ವಿಷಯದಲ್ಲಿ ಈ ರೀತಿ ಕನ್ನಡನಾಡಿನ ಸಾಹಿತಿಗಳನ್ನು ಕೂಡಿಸಬೇಕೆಂದು ಮಾಸ್ತಿಯವರೂ, ಶ್ರೀ ಗುಂಡಪ್ಪನವರೂ, ನಾನೂ, ಇತರ ಮಿತ್ರರೂ ಹತ್ತು ಹದಿನೈದು ವರ್ಷಗಳಿಂದಲೂ ಆಶಿಸುತ್ತಿದ್ದೆವು. ಇನ್ನೂ ಕಾಲ ಬಂದಿಲ್ಲ. ಹೊಂದಿಕೆಯಿಂದ ಎಲ್ಲರೂ ನಡಕೊಂಡು ಕೆಲಸ ಸಾಗಿಸಿಕೊಂಡು ಹೋಗುವ ಕಾಲ ಬಂದಿಲ್ಲ. ಭಿನ್ನದೃಷ್ಟಿಗಳನ್ನಿಟ್ಟಿದ್ದರೂ ನುಡಿಗಾಗಿ ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡುವ ಸ್ವಭಾವವು ನಮ್ಮಲ್ಲಿನ್ನೂ ಬಂದಿಲ್ಲದೇ ಇರಬಹುದು. ದುಡುಕಬಾರದು. ಸರಿಯಾದ ತಳಪಾಯದ ಮೇಲೆ ಮನೆಯನ್ನು ಕಟ್ಟಬೇಕು ಎಂಬುದಾಗಿ ಅಳೆದು ಸುರಿದು ನೋಡಿದ್ದಾಯಿತು. ಇಂದು ಸಾಹಿತಿಗಳ ಸಂಘಟನೆಗೆ ತಳಪಾಯ ಹಾಕಿದ್ದಾಯಿತು. ಆ ಸಂಘದ ಆಶ್ರಯದಲ್ಲಿ ನಡೆಯುವ ಸಮ್ಮೇಳನದಲ್ಲಿ ಮಾಸ್ತಿಯವರ ಭಾವಚಿತ್ರವನ್ನು ಅನಾವರಣ ಮಾಡುವ ಭಾಗ್ಯ ನನಗೆ ಲಭಿಸಿದೆ. ಇವರ ಭಾವಚಿತ್ರ ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಿರುತ್ತದೆ; ಇದು ಕನ್ನಡದ ಏಳಿಗೆಗೆ ಸೂಚನೆಯಾಗಿ ನಿಲ್ಲುತ್ತದೆ ಎಂದು ನನಗೆ ಭರವಸೆಯಿದೆ. ಅತ್ಯಂತ ಸಂತೋಷದಿಂದ, ನನ್ನ ಮಿತ್ರವರ್ಯರ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ. ಭಗವಂತನು ಅವರಿಗೆ ಆಯುರಾರೋಗ್ಯೈಶ್ವರ್ಯಗಳನ್ನೂ, ಇನ್ನೂ ಉನ್ನತ ಪದವಿಗಳನ್ನೂ ಕರುಣಿಸಿ ಚಿರಕಾಲ ಅವರಿಂದ ಕನ್ನಡತಾಯ ಸೇವೆಯನ್ನು ಮಾಡಿಸಲೆಂದು ಬೇಡುತ್ತೇನೆ.

[ಜೀವನ ೫–೧; ಮಾರ್ಚ್, ೪ ೧೯೪೦]

ಬಿನ್ನವತ್ತಳೆಗೆ ಉತ್ತರ

ಅಧ್ಯಕ್ಷರೇ, ಮಹಿಳೆಯರೇ ಮತ್ತು ಮಹನೀಯರೇ,

ನಮ್ಮ ಕಾಲೇಜಿನ ಕರ್ಣಾಟಕ ಸಂಘದ ಈ ಬೆಳ್ಳಿಯ ಹಬ್ಬದ ಉತ್ಸವಕ್ಕೆ ನನ್ನನ್ನು ಬರಮಾಡಿಕೊಂಡು ಗೌರವಿಸಿದ್ದಕ್ಕಾಗಿ ನಾನು ತಮಗೆ ಅತ್ಯಂತ ಕೃತಜ್ಞನಾಗಿದ್ದೇನೆ. ನನ್ನೊಡನೆ ನನ್ನ ಗಣ್ಯಮಿತ್ರರಾದ ರಾಜಸೇವಾಪ್ರಸಕ್ತ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್‍ಯರಿಗೂ ಬಿನ್ನವತ್ತಳೆಯನ್ನು ಕೊಟ್ಟು ನನ್ನ ವಿಚಾರವಾಗಿ ಮೆಚ್ಚಿಕೆಯ ಮಾತನ್ನು ಆಡಿದ್ದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಆದರೆ ದೇಹಾಲಸ್ಯ, ದೂರಪ್ರಯಾಣ, ಕಾರ್ಯಾಯಾಸ ಈ ಕಾರಣಗಳಿಂದ ಇಲ್ಲಿ ತಮ್ಮ ಮುಂದೆ ನಿಂತು ಮಾತನಾಡಲು ತ್ರಾಣ ಸಾಲದೆ, ಶ್ರೀಮಾನ್ ಮಾಸ್ತಿಯವರನ್ನೇ ನನ್ನ ಪರವಾಗಿಯೂ ಬಿನ್ನವತ್ತಳೆಗೆ ಉತ್ತರ ಕೊಡಿ ಎಂದು ಕೇಳಿಕೊಂಡೆ. ಆದರೆ ಅದಕ್ಕೆ ಅವರು ಒಪ್ಪಲಿಲ್ಲ. ಆದ್ದರಿಂದ ನಾನೇ ಎರಡು ಮಾತನ್ನು ಹೇಳಬೇಕಾಗಿ ಬಂತು. ನನ್ನಲ್ಲಿ ಹಲವು ನ್ಯೂನತೆಗಳಿವೆ. ಆದರೂ ಇರುವ ಸ್ವಲ್ಪ ಗುಣವನ್ನು ಕಂಡು ತಾವು ಸಂತೋಷದಿಂದ ಎರಡು ಮಾತುಗಳನ್ನು ಆಡಿರುತ್ತೀರಿ. ಅದು ಪ್ರೇಮದಿಂದ ಬಂದ ಮಾತು. ತಾಯಿನುಡಿಯ ಸೇವೆ ಮಾಡಬೇಕೆಂಬುದನ್ನು ನಾನು ಚಿಕ್ಕಂದಿನಿಂದಲೇ, ನನ್ನ ಕಾಲೇಜಿನ ವಿದ್ಯಾಭ್ಯಾಸದ ದಿನಗಳಲ್ಲೇ, ಕಲಿತೆ. ಆಗ ಹಿಂದಿನ ಪರಂಪರೆ ಕನ್ನಡದ ವ್ಯಾಸಂಗವನ್ನು ಮುಂದಕ್ಕೆ ತಂದಿತ್ತು. ಆಸಕ್ತಿಯುಳ್ಳ ಒಂದು ಶಿಷ್ಯವೃಂದ ಏರ್ಪಟ್ಟಿತ್ತು. ಒಲವನ್ನೂ ವಿದ್ಯೆಯನ್ನೂ ಗಳಿಸಿಕೊಂಡ ನಾವೆಲ್ಲರೂ ಕೆಲಸಮಾಡಿ ಕನ್ನಡದ ಜೀವಾಳವನ್ನು ತಿಳಿಯಲು ಬಯಸಿದೆವು. ಯಾವ ವಿದ್ಯೆಯಾದರೂ ಸರಿ, ಯಾವ ಬೆಳಕಾದರೂ ಸರಿ, ಅದನ್ನು ಕನ್ನಡದಲ್ಲಿ ತುಂಬಿ ಅದನ್ನು ಒಳ್ಳೆಯ ಭಾಷೆಯನ್ನಾಗಿ ಮಾಡಿ ಒಟ್ಟಿಗೆ ಬಾಳಬೇಕು ಎಂಬುದು ನಮ್ಮ ಹಿರಿಯಾಸೆ. ಅದನ್ನು ಪಡೆಯಲು, ಅಣ್ಣತಮ್ಮಂದಿರಂತೆ ಬಾಳಿ ಭಗವಂತನು ಕೊಟ್ಟಿರುವ ಶಕ್ತಿಯನ್ನು ಬೆಳಸಿಕೊಂಡು ಪರಸ್ಪರ ಧೈರ್ಯಹೇಳಿ, ಕೂಡಿಕೊಂಡು ಬಂದೆವು. ಕನ್ನಡಕ್ಕಾಗಿ ದಾಸಯ್ಯನಂತೆ ಹೊರಡಬೇಕು. ದೇಹವಿರುವವರೆಗೆ ದುಡಿಯಬೇಕು. ಸೇರಿ ಕೆಲಸಮಾಡಬೇಕು ಎಂದು ತರುಣರಾದ ನಾವು ಉತ್ಸಾಹಿಗಳಾಗಿದ್ದೆವು. ಅಂದಿನಿಂದ ಇಂದಿನವರೆಗೆ ಕನ್ನಡನಾಡಿನ ಕೆಲಸವನ್ನು ಎಲ್ಲರೂ ಸೇರಿ ತಕ್ಕಮಟ್ಟಿಗೆ ಮುಂದುವರಿಸಲಾಯ್ತು. ಕನ್ನಡನಾಡು ಒಡೆದುಹೋಗಿದೆ. ಇದನ್ನು ಹೇಗಾದರೂ ಒಂದುಗೂಡಿಸಬೇಕು, ಎಲ್ಲ ವ್ಯವಹಾರಗಳಲ್ಲಿಯೂ ಕನ್ನಡವನ್ನು ಬಳಸಬೇಕು, ಎಂಬ ಆಸೆ ನಮಗೆಲ್ಲರಿಗೂ. ಹೀಗೆ ಒಂದಾಗಿ ಕನ್ನಡನಾಡು ಶೋಭಾಯಮಾನವಾಗಿ ನಿಲ್ಲಬೇಕು. ಇದಕ್ಕಿಂತ ಹೆಚ್ಚೇನು ಹೇಳಲಾದೀತು?

ಇನ್ನು ಉತ್ತರ ಕರ್ಣಾಟಕದ ವಿಚಾರವಾಗಿ ಇಲ್ಲಿ ಎರಡು ಮಾತನಾಡುತ್ತೇನೆ. ಹದಿನೈದು ಇಪ್ಪತ್ತು ವವರ್ಷಗಳಿಂದ ಅಲ್ಲಿನ ಪರಿಚಯ ನನಗಿದೆ. ಈ ವಯಸ್ಸಿನಲ್ಲಿ ಅಲ್ಲಿಗೆ ಹೋಗಿ ನಾನು ಕೊಂಚ ಕಾಲ ನಿಲ್ಲುವುದಕ್ಕೆ ಕಾರಣವಿಲ್ಲದಿಲ್ಲ. ಎಷ್ಟೋಜನ ಸ್ನೇಹಿತರು ನಿಮ್ಮ ಆರೋಗ್ಯ ಮುಖ್ಯ, ಅಲ್ಲಿಗೆಹೋಗಬೇಡಿ ಎಂದು ಹೇಳಿದರು. ನಾನು ಒಲ್ಲೆನೆಂದರೂ ಅಲ್ಲಿನ ಕಾರ್ಯ ನನಗೆ ಗಂಟು ಬಿತ್ತು. ನನ್ನ ಸಹಾಯಕ್ಕೆ ಬರುವರೆಂದು ನಾನು ತಿಳಿದುಕೊಂಡಿದ್ದ ಮಾಸ್ತಿಯವರೇ 'ಹೋಗಿರಿ' ಎಂದು ಹೇಳಿಬಿಟ್ಟರು.(ಇಂಥ ಸ್ನೇಹಿತರು ಇರಬೇಕು ಕಷ್ಟಕಾಲದಲ್ಲಿ! ಇರಲಿ.) ನಾನು ಅಲ್ಲಿಗೆ ಕಲಾ ಶಾಲೆಯನ್ನು ನಡೆಸಲಿಕ್ಕೆಂದು ಹೋಗಲಿಲ್ಲ. ನನಗೆ ಹಿಡಿದ ಕನ್ನಡದ ಹುಚ್ಚು ಎಲ್ಲಿಯವರೆಗೆ ಹೋದೀತೋ, ನೋಡಿಯೇ ಬಿಡೋಣವೆಂದು ಹೊರಟೆ.

ಉತ್ತರ ಕರ್ಣಾಟಕದವರ ಮನಸ್ಸಿನಲ್ಲಿ ಈಗ ಎರಡು ವಿಷಯಗಳು ಕಡೆಯುತ್ತಿವೆ. ಒಂದನೆಯದು, ಕರ್ಣಾಟಕ ಒಂದಾದೀತೋ ಇಲ್ಲವೋ ಎಂಬುದು. ಇದಕ್ಕಾಗಿ ನಾವು ಅವರೊಡನೆ ಒಂದಾಗಿ ಸೇರಬೇಕು. "ಮೈಸೂರಿನವರು ಮಲಗಿ ನಿದ್ದೆ ಹೋಗುತ್ತಿದ್ದೀರಿ" ಎಂಬುದು ಅಲ್ಲಿನವರ ಮಾತು. ಅಲ್ಲಿ ಈಗ ಕರ್ಣಾಟಕದ ಏಕೀಕರಣ ಸಮ್ಮೇಲನ ನಡೆಯಲಿದೆ. ಏಕೀಕರಣವಾಗುವ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕರ್ಣಾಟಕವೆಲ್ಲ ಒಂದಾಗಲಾರದು; ಇದಕ್ಕೆ ಅನೇಕ ರಾಜಕೀಯವಾದ ತೊಂದರೆಗಳಿವೆ; ಆದ್ದರಿಂದ ಬ್ರಿಟಿಷ್ ಕರ್ಣಾಟಕವೆಲ್ಲ ಒಂದಾದರೆ ಸಾಕು, ಸಂಸ್ಥಾನಗಳು ಹಾಗೆಯೇ ಇರಲಿ– ಎಂಬುದು ಒಂದು ಪಕ್ಷದವರ ವಾದ. ಅವರಿಗೆ ನಾನು ಹೇಳುತ್ತೇನೆ: ನಾನು ಹುಚ್ಚುಕನಸಿನವ ಎಂದೆನ್ನಬೇಡಿ. ಎಲ್ಲ ಒಂದಾಗಬೇಕು. ಇದಕ್ಕೇನೂ ರಕ್ತಪಾತ ಬೇಕಿಲ್ಲ. ಮೈಸೂರು ಮಹಾರಾಜರವರು ಜವಾಬ್ದಾರಿ ಸರ್ಕಾರವನ್ನು ತಮಗೂ ಕೊಡಲು ಸಿದ್ಧರಾಗಿದ್ದ ಪಕ್ಷಕ್ಕೆ ಮೈಸೂರಿನವರೊಡನೆ ನೀವೂ ಸೇರುವುದು ಕ್ಷೇಮಕರ. ಮೂವತ್ತು ನಾಲ್ವತ್ತು ವರ್ಷಗಳಿಂದಲೂ ಕನ್ನಡವೆಲ್ಲ ಒಂದಾಗಬೇಕು ಎಂದಿರುವ ಆದರ್ಶವನ್ನು ಮರೆಯಲು ಯಾವ ಕನ್ನಡಿಗನಿಗೂ ಸಾಧ್ಯವಿಲ್ಲ. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾಯ್ತು. ಅದು ಸಾಧ್ಯವಾದಷ್ಟು ಕೆಲಸವನ್ನು ಮಾಡಿದೆ, ಮಾಡುತ್ತಲಿದೆ. ಈಗ ಸಂಸ್ಕೃತಿಯ ದೃಷ್ಟಿಯಿಂದ ಕೊಂಚವಾದರೂ ಏಕೀಕರಣ ಉಂಟಾಗಿದೆ.

ಎರಡನೆಯ ವಿಷಯ– ಕರ್ಣಾಟಕಕ್ಕೆಲ್ಲ ವಿಶ್ವವಿದ್ಯಾನಿಲಯ ಒಂದೇ ಇರಬೇಕೆನ್ನುವುದು. ಕನ್ನಡಿಗರೆಲ್ಲರಿಗೂ ವಿದ್ಯಾಭ್ಯಾಸದ ಒಂದು ಕೇಂದ್ರ ಸಂಸ್ಥೆ ಬೇಕು. ಅದರಲ್ಲಿ ನಾವು ಒಮ್ಮುಖವಾದ ಗುರಿಯನ್ನು ಕಾಣಬೇಕು. ಮೈಸೂರು

ವಿಶ್ವವಿದ್ಯಾನಿಲಯಕ್ಕೆ ಅಖಿಲ ಕರ್ಣಾಟಕದವರೂ ಬಂದು ಸೇರಲು ಅವಕಾಶವಿರಬೇಕು. ಹೀಗಾಗುವುದಕ್ಕೆ ಅನೇಕ ಅಡಚಣೆಗಳಿದ್ದುವು. ನನ್ನ ಕೈ ನಡೆಯುವ ಕಾಲದಲ್ಲಿ ಈ ಅಡಚಣೆಗಳನ್ನು ನಿವಾರಿಸಿದ್ದರಿಂದ ಹೈದರಾಬಾದಿನ ನೈಜಾಮ ಸರ್ಕಾರದವರು ಕಳಿಸಿಕೊಟ್ಟ ವಿದ್ಯಾರ್ಥಿಗಳಿಗೆ ವ್ಯಾಸಂಗದ ಸೌಕರ್ಯಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಕೊಟ್ಟಿತು. ಇದರಿಂದ ಹೈದರಾಬಾದಿನಲ್ಲಿ ಕನ್ನಡದ ಮುನ್ನಡೆ, ಇಲ್ಲಿ ಕಲಿತು ಹೋದ ವಿದ್ಯಾರ್ಥಿಗಳು ಕಾರಣವಾಗಿ, ಚುರುಕಿನಿಂದ ಸಾಗಿದೆ. ಮೈಸೂರು ವಿಶ್ವವಿದ್ಯಾನಿಲಯವು 'ಅಫಿಲಿಯೇಟಿಂಗ್ ಯೂನಿವರ್ಸಿಟಿ' ಆಗಿ ಕರ್ಣಾಟಕದಲ್ಲೆಲ್ಲಾ ತನ್ನ ಕವಲುಗಳನ್ನು ಚಾಚಬೇಕು. ಕೆಲವರಿಗೆ ಈ ವಿಚಾರವಾಗಿ ಕೊಂಚ ಭಯವೂ ಸಂದೇಹವೂ ಇವೆ. ಬೊಂಬಾಯಿ, ಮದರಾಸು ವಿಶ್ವವಿದ್ಯಾನಿಲಯಗಳಿಂದ ಎಂದು ಬಿಡುಗಡೆ ಆಗಬೇಕೋ ತಿಳಿಯದು.

ಈ ಸಂದರ್ಭದಲ್ಲಿ ಹೆಚ್ಚು ಮಾತಾಡಬಾರದು. ಸಾಹಿತ್ಯದ ಕಾರ್ಯವಾಗಲಿ, ಜನತೆಯ ಕಾರ್ಯವಾಗಲಿ, ವಿಶ್ವವಿದ್ಯಾನಿಲಯದ ಕಾರ್ಯವಾಗಲಿ ಜನತೆಯ ಬೆಂಬಲದ ಮೇಲೆ ನಿಂತಿದೆ. ಇದೊಂದನ್ನು ಎಲ್ಲರೂ ವಿಚಾರಮಾಡಿ. ಎಲ್ಲರ ಆಲೋಚನೆಯೂ ಬೆಳಕನ್ನು ಬೀರಲಿ!

[ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದವರು, ಸಂಘದ ಬೆಳ್ಳಿಯ ಹಬ್ಬದಂದು ನೀಡಿದ ಬಿನ್ನವತ್ತಳೆಗೆ ಕೊಟ್ಟ ಉತ್ತರ; 'ಬೆಳ್ಳಿಯ ಹಬ್ಬ', ೧೯೪೪.]

ಶಾಂತಾ

ಇದೊಂದು ಸಣ್ಣ ದೃಶ್ಯ. ಇದನ್ನು ಬರೆದವರು 'ಕೆಲವು ಸಣ್ಣಕತೆಗಳು' 'ಬಿನ್ನಹ' ಮುಂತಾದ ಗ್ರಂಥಗಳನ್ನು ರಚಿಸಿ ಆಗಲೇ ಕನ್ನಡಿಗರಲ್ಲಿ ಪ್ರಸಿದ್ಧರಾಗಿರುವ "ಶ್ರೀನಿವಾಸ"ರು. ಇವರ ಕಲ್ಪನಾ ಚಾತುರ್ಯವನ್ನೂ, ಲೋಕವ್ಯವಹಾರವನ್ನು ಪ್ರತಿಬಿಂಬಿಸುವ ಕೌಶಲವನ್ನೂ, ವರ್ಣನೆಗಳ ಸ್ವಾರಸ್ಯವನ್ನೂ, ಉದಾರಸೂಕ್ತಿಗಳನ್ನೂ, ಸರಸ ಹಾಸ್ಯಗಳನ್ನೂ, ಲಲಿತವಾಗಿಯೂ ಭಾವಗರ್ಭಿತವಾಗಿಯೂ ಇರುವ ಕನ್ನಡ ಶೈಲಿಯನ್ನೂ ಅನುಭವಿಸಿರತಕ್ಕವರಿಗೆ ಈ ಹೊಸಗ್ರಂಥದ ಪರಿಚಯವನ್ನೂ ಉಪಚಾರ ಸ್ತೋತ್ರಗಳಿಂದ ಮಾಡಿಕೊಡಬೇಕಾಗಿಲ್ಲ.

ಶ್ರೀನಿವಾಸರ ಕವಿತಾಶಕ್ತಿ ದಿನದಿನಕ್ಕೆ ವೃದ್ಧಿಯಾಗುತ್ತಿದೆ; ಅದು ನೈಸರ್ಗಿಕವಾಗಿ, ಜೀವವತ್ತಾದ ಪದಾರ್ಥವಾದುದರಿಂದ ಕನ್ನಡದಲ್ಲಿ ಬಹುಕಾಲದಿಂದ ಒಂದು ಸಂಪ್ರದಾಯವನ್ನು ಅನುಸರಿಸಿ ರಚಿತವಾಗುವ ಗ್ರಂಥರಾಶಿಯನ್ನು ಓದಿ ಬೇಸರಪಟ್ಟು, ಹೊಸಮಾರ್ಗದಲ್ಲಿ ಹೊಸಭಾವಗಳನ್ನು ತೋರಿಸಿ ಕಲ್ಪನಾಶಕ್ತಿಯನ್ನು ಕುದುರಿಸಬಲ್ಲ ಕಾವ್ಯಗಳನ್ನು ನಿರೀಕ್ಷಿಸಿಕೊಂಡಿರತಕ್ಕವರಿಗೆ ಶ್ರೀನಿವಾಸರ ಲೇಖನಗಳು ಬಹಳ ಸಂತೋಷವನ್ನು ಕೊಡುತ್ತವೆ. ಇವರಿಗೆ ನಾವೆಲ್ಲರೂ ಎಷ್ಟೋ ಕೃತಜ್ಞರಾಗಿದ್ದೇವೆ. ಇವರು ದೇಶವತ್ಸಲರಾಗಿ ತಮ್ಮ ಭಾಷೆಗಳಲ್ಲಿ ಜ್ಞಾನವನ್ನು ಹೊಂದಿರುವುದಲ್ಲದೆ, ಈಗಿನ ಕಾಲಕ್ಕೆ ಸೊಗಸುವುದಾದ ಇಂಗ್ಲಿಷ್ ಸಾಹಿತ್ಯದಲ್ಲಿಯೂ, ಈಗಿನ ಇಂಡಿಯದ ಕವಿಸಾರ್ವಭೌಮರಾದ ಟಾಗೋರ್ ಮಹನೀಯರ ಸಾಹಿತ್ಯದಲ್ಲಿಯೂ ಬಹಳ ಪರಿಶ್ರಮವುಳ್ಳವರಾಗಿ ಕಾಣುತ್ತಾರೆ. ಇವರ ಕವಿತ್ವವು ಜೀವವುಳ್ಳದ್ದೇ ಅಲ್ಲದೆ ಇಂಥಾ ಮಹದಾಶ್ರಯವುಳ್ಳದ್ದೂ ಆಗಿದೆ; ಅದಕ್ಕೆ ತಕ್ಕ ವ್ಯವಸಾಯವೂ ನಡೆಯುತ್ತಿದೆ. ಅವರು ಬಿಡುವ ಫಲವನ್ನು ನಾವು ಅನುಭವಿಸುತ್ತೇವೆ. ನಮ್ಮ ಸಂತೋಷ ಅವರ ಸಂತೋಷವಾಗಲಿ.

'ಶಾಂತಾ' ಎಂಬ ಈ ಗ್ರಂಥದಲ್ಲಿ ಅಲ್ಲಲ್ಲಿ ಕೆಲವು ಅಸಾಧುವಾದ ಶಬ್ದ ಪ್ರಯೋಗಗಳೂ, ಶಬ್ದರೂಪಗಳೂ, ವೃತ್ತದೋಷವೂ, ಭಾಷಾಸರಣಿಯೂ ವೈಯಾಕರಣಿಗಳ ದೃಷ್ಟಿಗೆ ಬೀಳದೆ ಇರಲಾರವು. ಅಂಥಾ ವೈಯಾಕರಣಿಗಳ ಸಹಾಯದಿಂದ ಎರಡನೆಯ ಮುದ್ರಣದಲ್ಲಿ ಈ ತಪ್ಪುಗಳನ್ನು ತಿದ್ದಬಹುದು. ಒಂದೆರಡು ಕಡೆ ಸರಸಾಲಾಪಕ್ಕೆ ಹೆಚ್ಚು ಗಮನಕೊಟ್ಟು ಗಾಂಭೀರ್ಯದ ಕಡೆಗೆ ಸ್ವಲ್ಪ ಕಡಮೆ ಗಮನಕೊಟ್ಟಂತೆ ನಮ್ಮ ಬುದ್ಧಿಗೆ ತೋರುತ್ತದೆ. ಆದರೆ ಈ ವಿಷಯದಲ್ಲಿ ಭಿನ್ನರುಚಿಗಳಿರಬಹುದಾಗಿದೆ. ಮೊದಲಿಂದ ಕೊನೆಯವರೆಗೆ ಆನಂದದಿಂದ ಓದಿದ ಕವಿತ್ವದಲ್ಲಿ ದೋಷಗಳನ್ನು ಪ್ರಸ್ತಾಪಿಸುವುದಕ್ಕೆ ಮನಸ್ಸು ಬರುವುದಿಲ್ಲ. ಪಂಡಿತಕಲ್ಪಿತವಾಗಿ, ನಿರ್ದುಷ್ಟವಾದ, ನಿರ್ಗಂಧ ಕುಸುಮಗಳು ಎಷ್ಟೋ ಇವೆ. 'ಶಾಂತಾ' ದೃಶ್ಯವು ಕತ್ತರಿಸಿ ಕಟ್ಟಿದ ಕಾಗದದ ಹೂವಲ್ಲ; ಕವಿಸ್ವಭಾವವುಳ್ಳವರ ಹೃದಯದಿಂದ ಅರಳಿ ಬಂದ ಗುಲಾಬಿ. "ಹೃದಯದಿಂದ ಬಂದದ್ದು ಹೃದಯಕ್ಕೆ ಹೋಗುತ್ತದೆ" ಎಂದು ಇಂಗ್ಲಿಷಿನಲ್ಲಿ ಹೇಳುತ್ತಾರೆ.

ಈ ದೃಶ್ಯದ ಕಥೆಯನ್ನು ಸ್ವಲ್ಪ ಬದಲಾವಣೆ ಮಾಡಿ ಶ್ರೀಮದ್ರಾಮಾಯಣದ ಋಷ್ಯಶೃಂಗೋಪಾಖ್ಯಾನದಿಂದ ತೆಗೆದುಕೊಂಡಿರುತ್ತಾರೆ. ಈ ಆಧಾರವನ್ನು ಗ್ರಂಥಕರ್ತರೆ, ಸೂಚಿಸಿರುತ್ತಾರೆ. ಬದಲಾವಣೆಗಳನ್ನು ವಿಚಾರ ಮಾಡಿದಲ್ಲಿ ರಾಮಾಯಣದ ಚಿನ್ನದ ಗಟ್ಟಿಯನ್ನು ಕರಗಿಸಿ ಶ್ರೀನಿವಾಸರು ಮಾಡಿರುವ ನಯಗೆಲಸ ಚೆನ್ನಾಗಿ ಹೊರಪಡುತ್ತದೆ. ಅಂಗದೇಶದಲ್ಲಿ ಕ್ಷಾಮವಾಗಿ, ಸ್ತ್ರೀವ್ಯಕ್ತಿಯನ್ನು ಕಂಡರಿಯದ ಋಷ್ಯಶೃಂಗನನ್ನು ವೇಶ್ಯೆಯರ ಮೂಲಕ ಅಂಗರಾಜನು ಬರಮಾಡಿಕೊಂಡು ಯಾಗ ಮಾಡಿಸಿ, ಮಳೆಯನ್ನು ಪಡೆದು, ಮಗಳಾದ ಶಾಂತಾದೇವಿಯನ್ನು ಆತನಿಗೆ

ವಿವಾಹಮಾಡಿಕೊಟ್ಟದ್ದೇ ಮೂಲದ ಕಥೆ. ಇಲ್ಲಿ ಯಜ್ಞದ ಫಲದ ಮೇಲೆ ಕೆಲವರ ಮನಸ್ಸು ಓಡಬಹುದು. ಆದರೆ ಸ್ತ್ರೀಯರನ್ನು ಕಾಣದ ಪುರುಷ, ಸ್ತ್ರೀ ಸೌಂದರ್ಯದ ಆಕರ್ಷಣ ಶಕ್ತಿ ಕವಿದ ಹೃದಯವನ್ನು ಹಿಡಿದು, ಕಲ್ಪನಾ ಶಕ್ತಿಯನ್ನು ಎಚ್ಚರಿಸತಕ್ಕುವು ಇವು. ಶ್ರೀನಿವಾಸರ ದೃಷ್ಟಿ ಇಲ್ಲಿ; ಆತ್ಮದೃಷ್ಟಿಯಿಂದ ನೋಡುತ್ತ, ಈ ಋಷಿಕುಮಾರನನ್ನು ವೇಶ್ಯೆಯರ ಲಂಪಟಕ್ಕೆ ಸಿಕ್ಕಿಸದೆ, ಸ್ವಾರ್ಥತ್ಯಾಗಿಯಾದ ರಾಜಕುಮಾರಿಯ ಪ್ರೇಮಸೌಂದರ್ಯಕ್ಕೆ ಸಿಕ್ಕಿಸಿ, ಧರ್ಮಕಾರ್ಯವನ್ನು ಸಾಗಿಸಿ, ಚಂಚಲಕುಮಾರನಿಗೆ ಶಾಂತಾ ಎಂಬ ಹೆಸರು ಸಾರ್ಥಕವಾಗುವಂತೆ ಮಾಡಿದ್ದಾರೆ. ರಾಮಾಯಣದ ಚಿನ್ನಕ್ಕೆ ಇವರು ಕಾಂತಿಯನ್ನು ಕೊಟ್ಟದ್ದಲ್ಲದೆ ದಿವ್ಯಪರಿಮಳವನ್ನು ತುಂಬಿಲ್ಲವೆ?

ಈ ಮುಖ್ಯೋದ್ದೇಶಕ್ಕೆ ತಕ್ಕಂತೆ ಮಿಕ್ಕ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ. ಅಂಗದೇಶವನ್ನು ಬಿಟ್ಟು ಕೇರಳದೇಶದಲ್ಲಿ ರಂಗವನ್ನು ಹೂಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ, ಅದರಲ್ಲಿಯೂ ಅಕ್ಷ್ಮೀಶನಲ್ಲಿ ಕೇರಳಸ್ತ್ರೀಯರ ಪ್ರಭಾವವನ್ನು ಓದದವರು ಯಾರು? ಧೈರ್ಯ, ಸೌಂದರ್ಯ, ಕಲಾಪುಷ್ಟಿ, ಗಾನ– ಕೇರಳರಾಜಪುತ್ರಿಯಲ್ಲಿ ಇವಕ್ಕೆ ಏನು ಕೊರತೆ? ಕೇರಳದೇಶದ ಮಲೆನಾಡಿನಲ್ಲಿ ಆಶ್ರಮವಿದ್ದರೆ ಅಲ್ಲಿ ಪ್ರಕೃತಿಸೌಂದರ್ಯಕ್ಕೂ, ಅದರ ಮೂಲದ ಆತ್ಮಾನಂದಕ್ಕೂ ಪಾರವುಂಟೆ? ಋಷ್ಯಶೃಂಗರ ತಪೋನಿಯಮವನ್ನು ಭಂಗಮಾಡಲು ರಾಜನು ಒಪ್ಪದಿರುವಾಗ, ಚಂಚಲಕುಮಾರಿ ಬಂದು, ತನ್ನ ಜಾತಕಯೋಗದಿಂದ ಕ್ಷಾಮ ಬಡಿಯಿತೆಂದು ಜನರು ಆಡಿಕೊಳ್ಳುತ್ತಿರುವುದರಿಂದ ತಾನೇ ಹೋಗಿ ಆ ಋಷಿಕುಮಾರನನ್ನು ಕರೆತರುವುದಾಗಿ ಹೇಳುವಳು. ಗಾನವಿಶಾರದೆಯರಾದ ಸಖಿಯರೊಡನೆ ಆಶ್ರಮಕ್ಕೆ ಹೋಗಿ ಗಂಡುವೇಷವನ್ನು ತಾಳಿ, ಋಷ್ಯಶೃಂಗನಲ್ಲಿ ಸ್ನೇಹವನ್ನು ಬೆಳೆಸಿ, ತನ್ನನ್ನು ಅಗಲಿ ಅವನು ಇರಲಾರದಂತೆ ಪ್ರೇಮವನ್ನು ಹುಟ್ಟಿಸಿ, ಕಡೆಗೆ ತಾನು ಊರಿಗೆ ಹೊರಡುವುದಾಗಿ ಹೇಳುತ್ತಾಳೆ. ತಂಗಿಯನ್ನು ಬಿಟ್ಟಿರಲಾರೆನೆಂದು ನೆವ ತೆಗೆದು ಸ್ತ್ರೀ ಪ್ರಸಂಗವನ್ನೆತ್ತಿ ವರ್ಣನೆ ಮಾಡಿ ತನ್ನ ಸ್ತ್ರೀ ರೂಪಿನಲ್ಲಿ ಕಾಣಿಸಿಕೊಂಡು ಕೆಳದಿಯರೊಡನೆ ಚಂಚಲಕುಮಾರಿ ಹಿಂದಿರುಗುತ್ತಾಳೆ. ಋಷ್ಯಶೃಂಗನು ತಾನು ಚಂಚಲನಾಗಿ ತಂದೆಯ ಆಜ್ಞೆಯನ್ನು ಮೀರಿ, ಚಿರಜೀವನವನ್ನು ಕಳೆದುಕೊಂಡು, ಚಂಚಲೆಯ ಹಿಂದೆಯೇ ಕೇರಳ ರಾಜಧಾನಿಗೆ ಬರುತ್ತಾನೆ. ಯಜ್ಞ ನಡೆದು, ಮಳೆಕರೆದು, ಜನರು ಬದುಕುತ್ತಾರೆ. ಋಷ್ಯಶೃಂಗನು ರಾಜನು ಅರ್ಪಿಸಿದ ರಾಜ್ಯವನ್ನು ಒಲ್ಲದೆ, ಚಂಚಲಕುಮಾರನನ್ನು ನನ್ನೊಡನೆ ಕಳುಹಿಸಿಕೊಡೆಂದು ಕೇಳಿ "ನನಗೆ ಮಗನಿಲ್ಲ, ಮಗಳೊಬ್ಬಳಿದ್ದಾಳೆ; ಅವಳನ್ನು ಸ್ವೀಕರಿಸಬೇಕು" ಎಂದು ಹೇಳಿದ ರಾಜನ ಪ್ರಾರ್ಥನೆಗೆ ಒಪ್ಪುತ್ತಾನೆ. ಆಗ ಚಂಚಲೆ ಬರುವಳು.

ಋಷ್ಯ : ನೀನು ಚಂಚಲನೋ ನಿನ್ನ ತಂಗಿಯೋ?

ಚಂಚಲ : ನಾನು ನಿಮ್ಮ ಮಿತ್ರನಾದ ಚಂಚಲ. ನಿಮ್ಮ ಸೇವೆಗೆಂದು ಬಂದಿರುವ ಚಂಚಲೆ; ಇಬ್ಬರೂ ಒಂದೇ.

ಇಷ್ಟರಲ್ಲಿ ಋಷ್ಯಶೃಂಗನ ತಂದೆಗಳು ವಿಭಾಂಡಕ ಮುನಿಗಳು ಮಗನಿಗೆ ವ್ರತಭಂಗವಾಗಿ ಚಿರಜೀವಿತ್ವ ಸಿದ್ಧಿಸಲಿಲ್ಲವಲ್ಲಾ ಎಂಬ ಆಗ್ರಹದಿಂದ ಬರುತ್ತಾ, ಪ್ರಜಾರಕ್ಷಣೆಯಾಯಿತೆಂದು ಸ್ವಲ್ಪ ಸಮಾಧಾನಚಿತ್ತರಾಗಿ, ಚಂಚಲಕುಮಾರಿ ನಮಸ್ಕರಿಸುತ್ತಲೇ ಕೋಪ ಅದೃಶ್ಯವಾಗಿ "ರಾಜ್ಯದ ಕ್ಷೋಭೆಗೆ ಶಾಂತಿಯನ್ನು ತಂದಂಥವಳೂ ನನ್ನ ಅತೀವವಾದ ಆಗ್ರಹವನ್ನು ಇಷ್ಟು ಸುಲಭವಾಗಿ ಶಮನಗೊಳಿಸಿದವಳೂ ಆದ ಇವಳನ್ನು ಇಂದಿನಿಂದ ಶಾಂತಾ ಎಂದು ಕರೆಯುವುದು" ಎಂದು ಅನುಗ್ರಹಿಸಿ ಮಂಗಳ ಮಾಡುವರು.

ಈ ಕಥಾಸಂವಿಧಾನದ ಸ್ವಾರಸ್ಯವೇ ಅಲ್ಲ, ಎರಡನೆಯ, ಮೂರನೆಯ ಸ್ಥಾನಗಳಲ್ಲಿರುವ ಸಲ್ಲಾಪಗಳೂ, ಪ್ರಕೃತಿ ಸಂಬಂಧವಾದ ಗಾನಗೀತಗಳೂ, ಆತ್ಮವಿಷಯಕವಾದ ತತ್ತ್ವಗಳೂ ಬಹುರಮ್ಯವಾಗಿಯೂ, ಪರಮೋತ್ಕೃಷ್ಟವಾಗಿಯೂ ಇರುವುವು. ಇವನ್ನು ಓದಿಯೇ ಆನಂದಿಸಬೇಕು. ಪ್ರಕೃತಿಸಸೌಂದರ್ಯದ ಮೂಲಕ ಭಗವಂತನ ಸೌಂದರ್ಯವನ್ನು ಮನುಷ್ಯನ ಆತ್ಮವು ಕಂಡು ಸಂತೋಷಪಟ್ಟರೂ, ಅದರಲ್ಲಿ ಏನೋ ಅತೃಪ್ತಿಯಿರುವುದೆಂದೂ, ಮನುಷ್ಯನಿಗೆ ಮನುಷ್ಯನಲ್ಲಿ, ಪುರುಷನಿಗೆ ಸ್ತ್ರೀಯರಲ್ಲಿ ಪ್ರೇಮದ ಮೂಲಕ ಸೌಂದರ್ಯಾನುಭವವಾದರೆ ಆಗ ಭಗವಂತನ ಸೃಷ್ಟಿ ಸೌಂದರ್ಯವು ಸಂಪೂರ್ಣವಾಗಿ ಆತ್ಮಕ್ಕೆ ತೃಪ್ತಿಯನ್ನು ಮಾಡುವುದೆಂದೂ ಋಷ್ಯಶೃಂಗನು ಅನುಭವದಿಂದ ತಿಳಿಯುತ್ತಾನೆ. ಈ ಸಿದ್ಧಿಯ ಮುಂದೆ ಚಿರಜೀವಿತ್ವವೇ?

"ಚಂಚಲೆ,– ಚಿರಂಜೀವಿಯಾಗಿರುವುದಕ್ಕೆ ಹದಿನೆಂಟು ವರ್ಷ ಕಳೆಯುವವರೆಗೂ ತಾಯಿ ಎನ್ನುವುದು ತಿಳಿಯದೆ ಇರಬೇಕಾದರೆ, ಈ ಚಿರಜೀವಿತ್ವವೇಕೆ?" " ಪರಮಾತ್ಮನು ಕರುಣೆಯಿಂದ ನೋಡುವ ಸ್ಥಳದಲ್ಲೆಲ್ಲಾ ತಾಯಿ ಇರುವಳು".

ಪರಮಾತ್ಮನ ಪ್ರೇಮ, ಕರುಣ, ಇವುಗಳ ಅನುಭವ– ಮನುಷ್ಯನಲ್ಲಿ ಪರಮಾತ್ಮ ದೃಷ್ಟಿಯಿಂದ ಧರ್ಮಜೀವನ– ಇವೇ ಜೀವನರಹಸ್ಯವಲ್ಲವೆ?

ಭಗವಂತನು ಶ್ರೀನಿವಾಸರ ಕವಿತಾತೇಜಸ್ಸು ವೃದ್ಧಿಯಾಗುವಂತೆ ಮಾಡಲಿ; ಚಿರಕಾಲ ಅವರು ಕನ್ನಡಮಾತೆಯ ಸೇವೆಯನ್ನು ಮಾಡಿ ನಮಗೆಲ್ಲಾ ಸಂತೋಷವನ್ನು ಕೊಡಲಿ, ಇದೇ ನಮ್ಮ ಪ್ರಾರ್ಥನೆ.

[ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ ೫–೮ರಲ್ಲಿ ಅಚ್ಚಾದ ವಿಮರ್ಶೆ]

ಸೂಕ್ತಿ ಸುಧೆ

ಬಿ. ಶ್ರೀಕಂಠಯ್ಯನವರೂ ನಾನೂ ಚಿಕ್ಕಂದಿನಿಂದ ಗೆಳೆಯರು; ಶ್ರೀರಂಗಪಟ್ಟಣದಲ್ಲಿ ಬೆಳೆದವರು. ಅವರ ಕನ್ನಡ ಪ್ರೇಮವನ್ನೂ (೨ನೆಯ ಅನುಬಂಧದಲ್ಲಿ ಸೂಚಿಸಿರುವ) ಲಿಪಿ ಸಂಸ್ಕರಣದ ಪ್ರಸಾರಣವನ್ನೂ ಮೊದಲಿನಿಂದಲೂ ನೋಡಿ ಸಂತೋಷಪಡುತ್ತಿರುವೆನು. ಹೀಗೇ ಸರಿ ಎಂದಲ್ಲ, ಕನ್ನಡಕ್ಕಾಗಿ ದುಡಿಯುತ್ತಿರುವರಲ್ಲಾ ಎಂದು. ಇವರ ಇಂಥ ದುಡಿಮೆಯ ಫಲಗಳಲ್ಲೊಂದು ಈ 'ಸೂಕ್ತಿ ಸುಧೆ'.

ಈ ಗ್ರಂಥದಲ್ಲಿ ಮನೋಜ್ಞವಾದ ವಿಷಯಗಳು ತುಂಬಿವೆ. ಇಲ್ಲಿನ ೧೫ ಪದ್ಧತಿಗಳನ್ನು ಮೂರು ಪಂಚಕಗಳಾಗಿ ಭಾಗಿಸಬಹುದು. ಮೊದಲ ಪಂಚಕ ಬಾಲ್ಯಕ್ಕೂ, ನಡುವಣದು ತಾರುಣ್ಯಕ್ಕೂ, ಕಡೆಯದು ವಾರ್ಧಕಕ್ಕೂ ಹೊಂದುವುವು.

ಈ ಪದ್ಯಗಳು ಮುತ್ತುಗಳಂತಿವೆಯಲ್ಲವೆ? ಇವು ಯಾರ ಕೊರಳಿಗೆ ಅಂದವಾಗಲಾರವು!

ಜನರೆಲ್ಲ ನಗುತಿರಲು! ಜನನದಲೆ ನಾನತ್ತೆ॥
ಜನಹಿತವಗೈಸಿ ಬಾಳಿಸೊ; ಮಡಿವಲ್ಲಿ ।
ಜನರಳಲಿ ನನಗೆ ಸರ್ವೇಶ ॥೨೬೦॥

ಮಡಿವನಕ ಹೃದ್ಯಂತ್ರ ।ನಡೆಯುತಿರೆ ಕರ್ಮಕ್ಕೆ ॥
ಬಿಡುವುದುಂಟೆ? ಫಲದಾಶೆಯನು ತೊಡೆಯುತ್ತ
ತೊಡಗಲೇಬೇಕು ಸರ್ವೇಶ ॥೨೬೫॥

ಮರವಿರದೆ ಕಾಡಹುದೆ? । ನರರಿರದೆ ನಾಡಹುದೆ?॥
ವರನಿರದೆ ಮದುವೆಯೆ? ಧುರವೆ ಬಲವಿರದೆ? ।
ಗುರುವಿರದೆ ಪರವೆ? ಸರ್ವೇಶ ॥೨೯೮॥

ಕುರಿಮರಿಯ ಕಂಕುಳಲಿ । ಇರುಕಿದ್ದು ಎಲ್ಲೆಲ್ಲು॥
ಅರಸುತಿಹ ಕುರುಬನ ತೆರದೆ ಪರಮನನು ।
ಹೊರಗೆ ಹುಡುಕುವರೆ? ಸರ್ವೇಶ ॥೩೦೩॥

ಇವರ ಕನ್ನಡದ ಉಜ್ವಲಭಕ್ತಿ ಈ ಪದ್ಯಗಳಲ್ಲಿ ಹೊಮ್ಮಿ ಕಾಣುವುದು:

ಒಡೆತನದ ಪರಭಾಷೆ । ಎಡಬಲದ ಕಗ್ಗಗಳು ॥
ಇಡಿನಾಡ ಹಿಂದಿ ಬಡಿವವು ಕನ್ನಡಿಗ ।
ಬಡತಾಯ ಬಾಯ ಸರ್ವೇಶ ॥೨೮॥

ಕನ್ನಡಿಗಜನಪತಿಗೆ।ಕನ್ನಡದಜನಪದಕೆ॥
ಕನ್ನಡದಕವಿಗೆ।ಕನ್ನಡದಸಂಸ್ಕೃತಿಗೆ
ಮುನ್ನಜಯವಕ್ಕೆಸರ್ವೇಶ

ಪೀಠಿಕೆಯ ತುದಿಯಲ್ಲಿ ತಪ್ಪುಗಳನ್ನು ತಿದ್ದಿಕೊಡಬೇಕಾಗಿ ಪ್ರಾಜ್ಞರನ್ನು ಪ್ರಾರ್ಥಿಸಿರುವರು. ಏನಿದ್ದರೂ, ಸುಧಾರಣೆ ಮುಂದಿನ ಮುದ್ರಣಕ್ಕಷ್ಟೆ? ಥಾಮಸ್ ಕಾರ್ಲೈಲ್ (ಪು. ೬೮)

"If a book comes from the heart, it will contrive to reach other hearts; all art and author craft are of small account to that".

ಎಂದಿರುವನು. ಇದನ್ನು ಶ್ರೀಕಂಠಯ್ಯನವರೇ ಹೀಗೆ ಕನ್ನಡಿಸಿರುವರು:

ಹೃದಯದಿಂ ಚಿಮ್ಮಿದುದು। ಸದಯರಾ ಎದೆಹೊಕ್ಕು ॥
ಹುದುಗದೇಂ? ಕವನದ ಹುಟ್ಟುಕಟ್ಟುಗಳ।
ಹದನು ಹೆಚ್ಚೇನು? ಸರ್ವೇಶ

ಅಂತೆ ದೋಷಗಳನ್ನು ಬಿಟ್ಟು ಗುಣವನ್ನು ಸಹೃದಯರು ಸ್ವೀಕರಿಸಬೇಕು.

ಸರ್ವಜ್ಞನು ನಮ್ಮಲ್ಲಿ ಒಂದು ರತ್ನ; ಅವನ ವೀಣೆಯನ್ನು ಮೀಟುವ ಶಿಷ್ಯರೂ ಜನರಿಗೆ ಪ್ರಿಯರಾದಾರೆಂದು ಹಾರೈಸುತ್ತೇನೆ.

[ಬಿ. ಶ್ರೀಕಂಠಯ್ಯನವರ 'ಸೂಕ್ತಿಸುಧೆ' ಪುಸ್ತಕಕ್ಕೆ ಬರೆದ ಮುನ್ನುಡಿ; ೩೦-೭-೧೯೨೮)

ಕೊಳಲು

ಶ್ರೀಮಾನ್ ಪುಟ್ಟಪ್ಪನವರ 'ಕೊಳಲಿ'ಗೆ ಮುನ್ನುಡಿ ನುಡಿಯುವುದು ನನಗೊಂದು ಹೆಮ್ಮೆಯ ವಿಷಯ.

ಕನ್ನಡ ಕಾವ್ಯದ ಹೊಲವನ್ನು ಹೊಸರೀತಿಯಲ್ಲಿ ಉತ್ತು ಬೆಳೆ ಮಾಡಬೇಕೆಂದು ಪ್ರಯತ್ನ ಪಡುತ್ತಿರುವವರಲ್ಲಿ ಶ್ರೀ ಪುಟ್ಟಪ್ಪನವರ ಸಾಧನೆ ಸ್ತೋತ್ರಾರ್ಹವಾಗಿದೆ. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಇವರು ವಿದಾರ್ಥಿ ಕವಿಸಮ್ಮೇಳನಕ್ಕೆ ಅಧ್ಯಕ್ಷರಾದರು. ಈಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೋಧಕರಾಗಿ ತಮ್ಮ ಉತ್ಸಾಹವನ್ನು ಕಿರಿಯರಲ್ಲಿ ತುಂಬುತ್ತಿರುವರು. ಶ್ರೀಮನ್ ಮಹಾರಾಜರವರ ಜೂಬಿಲಿ ಮಹೋತ್ಸವದಲ್ಲಿ ತಮ್ಮ ರಾಜಭಕ್ತಿಯನ್ನೂ, ದೇಶಭಕ್ತಿಯನ್ನೂ "ಬೆಳ್ಳಿಯ ಹಬ್ಬದ ಕಬ್ಬದ ಬಳ್ಳಿ" ಎಂಬ ಗೀತದಲ್ಲಿ ಪ್ರಕಟಿಸಿರುತ್ತಾರೆ. ಇವರ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಗೆ ಮರುಳಾಗದ ಮಕ್ಕಳೇ ಇಲ್ಲ. 'ಯಮನ ಸೋಲು', 'ಜಲಗಾರ', 'ಚಂದ್ರಹಾಸ', 'ಬಿರುಗಾಳಿ' ಮುಂತಾದ ನಾಟಕಗಳು ವಿಧ ವಿಧ ಪ್ರಯತ್ನ ಪರೀಕ್ಷೆಗಳಿಗೆ ಸಾಕ್ಷಿಗಳಾಗಿವೆ. ಇವರ ಕವನಗಳನ್ನು ಸರಸ್ವತೀದೇವಿಯೇ ನುಡಿಸುತ್ತಿರುವಳೆಂಬುದರಲ್ಲಿ ಸಂದೇಹವಿಲ್ಲ.

ಕವಿತ್ವ ಮಾಡುವ ಕುತೂಹಲದಿಂದ ಗ್ರಂಥಗಳನ್ನು ತಡಕಿ, ಲಕ್ಷಣಗಳನ್ನು ಹಿಸುಕಿ, ಹತ್ತು ದಿಕ್ಕುಗಳನ್ನೂ ನೋಡುತ್ತ ಕ್ಲೇಶಪಡುತ್ತಿದ್ದ ತನಗೆ ವಾಗ್ದೇವಿ ಬಂದು, ಕಿವಿಯನ್ನು ನುಲಿದು 'ಹುಚ್ಚ', ನಿನ್ನ ಹೃದಯದಲ್ಲಿ ನೋಡಿ ಬರೆ' ಎಂಬುದಾಗಿ ಉಪದೇಶಿಸಿದಳೆಂದು ಒಬ್ಬ ಇಂಗ್ಲಿಷ್ ಕವಿ ಹೇಳಿರುತ್ತಾನೆ. ಅದೇ ರಹಸ್ಯವನ್ನು ಮತ್ತೊಬ್ಬ ಇಂಗ್ಲಿಷ್ ಕವಿ 'ಹೃದಯದಿಂದ ಬರುವುದು ಯಾವುದೋ, ಅದೇ ಹೃದಯಕ್ಕೆ ಹೋಗುವುದು' ಎಂಬುದಾಗಿ ಸಾರಿದ್ದಾನೆ. ಪುಟ್ಟಪ್ಪನವರ ಕವಿತ್ವಗಳೆಲ್ಲಾ ಹೃದಯದಿಂದ ಬಂದುವೇ; ನೇರವಾಗಿ ಹೃದಯಕ್ಕೆ ಹೋಗತಕ್ಕುವೇ. ಇವರು ಹುಟ್ಟಿ ಬೆಳೆದದ್ದು ಶಿವಮೊಗ್ಗೆಯ ಪ್ರಾಂತದ ಮಲೆನಾಡಿನ ಒಕ್ಕಲು ಮಕ್ಕಳ ಕುಲದಲ್ಲಿ; ಈಗ ಇವರ ವಾಸ, ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ; ಉದ್ಯೋಗ, ಕಾವ್ಯಪ್ರಿಯರೊಡನೆ ಕವಿತಾ ಪ್ರಸಾದವನ್ನು ಸವಿಯುವುದರಲ್ಲಿ. ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು. ಇವರ ತಿರುಳುಗನ್ನಡ ನುಡಿಗಳು, ಇಂಪಾದ ಹೊಸ ಹೊಸ ಮುದ್ದು ಪದ್ಯಗಳು, ಸರಳ ಶೈಲಿ, ಭಾವೋದ್ರೇಕ, ಗೀತಪ್ರವಾಹ, ಇವುಗಳ ಹೊಡೆತದಲ್ಲಿ ಏನಾದರೂ ತಪ್ಪುಗಳು ಒಂದುವೇಳೆ ಬಿದ್ದಿದ್ದರೂ ಅವು ಕಾಣದಂತೆ ಮುಚ್ಚಿ ಹೋಗುವುವು. ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ; ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ; ಆತ್ಮವಿದೆ; ಇರುವುದರಿಂದ ಅಮೃತತ್ವದ ಸಾರವಿದೆ.

ಸಣ್ಣ ವಯಸ್ಸಿನಲ್ಲಿಯೇ ಪುಟ್ಟಪ್ಪನವರ ಕೀರ್ತಿಲತೆ ಕನ್ನಡನಾಡಿನಲ್ಲೆಲ್ಲಾ ಹಬ್ಬಿಕೊಂಡಿರುವುದು. ಅವರ ಕಾವ್ಯದ ಬಳ್ಳಿ ಕುಡಿಹೊಮ್ಮಿ ಹೂವಾದದ್ದು, ಬಲಿಯುತ ಬಲಿಯುತ ಉತ್ಕೃಷ್ಟವಾದ ಫಲಗಳನ್ನು ಬಿಡುವುದೆಂದು ಅವರನ್ನು ಬಲ್ಲವರೆಲ್ಲರ ನಂಬಿಕೆ ಮತ್ತು ಹಾರೈಕೆ. ಅವರ "ಜೀವರಥೋತ್ಸವ" ಸಪಥವಾಗಿ ನಡೆಯಲಿ!

[ಕುವೆಂಪು ಅವರ 'ಕೊಳಲು' ಕವನ ಸಂಕಲನಕ್ಕೆ ಬರೆದ ಮುನ್ನುಡಿ; ೭-೧-೧೯೩೦]

ಕೋಗಿಲೆ

ಮ॥ ರಾ॥ ಡಿ. ಆರ್. ರಾಮಯ್ಯನವರ ಕವನಗಳನ್ನು ಓದಿ ಸಂತೋಷಪಟ್ಟೆನು. ಕವಿತಾರಚನೆ ಚೆನ್ನಾಗಿದೆ. ಕನ್ನಡದ ಸೇವೆಯಲ್ಲಿ ಇವರು ಬಹಳ ಉತ್ಸಾಹಶಾಲಿಗಳಾಗಿದ್ದಾರೆ; ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಸರಸ್ವತೀದೇವಿಯ ಪ್ರಸಾದವನ್ನು ಸಂಪೂರ್ಣವಾಗಿ ಪಡೆದು, ಇವರು ಕನ್ನಡಿಗರ ವಿಶ್ವಾಸ ಗೌರವಗಳಿಗೆ ಅರ್ಹರಾಗಲೆಂದು ನಾನು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

[ಡಿ. ಆರ್. ರಾಮಯ್ಯ ಅವರ 'ಕೋಗಿಲೆ' ಕವನ ಸಂಕಲನದಿಂದ; ೨೬-೧-೧೯೩೧]

ಗೀತಗಳು

ಶ್ರೀಮಾನ್ ವಿ. ಸೀತಾರಾಮಯ್ಯನವರ 'ಪಂಪಾಯಾತ್ರೆ' ಮತ್ತು 'ಸೊಹ್ರಾಬ್- ರುಸ್ತುಂ' ಇವುಗಳನ್ನು ಓದಿ, ನೋಡಿ ಸಂತೋಷಪಟ್ಟವರು ಅವರ ಈ ಗೀತೆಗಳನ್ನು ಉತ್ಸಾಹದಿಂದ ಬರಮಾಡಿಕೊಳ್ಳದೆ ಬಿಡರು. ಈ ಭರವಸೆ ಇರುವುದರಿಂದ ಈ ಗೀತೆಗಳ ಪ್ರಶಂಸೆಯನ್ನು ನಾನು ಬೇರೆ ಮಾಡಬೇಕಾಗಿಲ್ಲ. ಇದಲ್ಲದೆ ಅವರಿಗೂ ನನಗೂ ಇರುವ ವಿಶ್ವಾಸದ ಕಟ್ಟೂ ನನ್ನ ಬಾಯನ್ನು ಕಟ್ಟುತ್ತಿದೆ.

ಇಷ್ಟು ಹೇಳಬಹುದು. ಒಂದು ಕ್ರಮಕ್ಕೆ ತಂದು, ಸಮೆದ ಹಾದಿಯ, ಹಿಂದಿನ ಕವಿತ್ವದಲ್ಲಿ ಓದುದವವರಿಗೆ ಗೊತ್ತು- ಬರೆಯುವವರಿಗೂ ಗೊತ್ತು- ಹೀಗೆಯೇ ಹೇಳುತ್ತಾರೆ, ಹೀಗೆಯೇ ಬರೆಯುತ್ತಾರೆ ಎಂಬುದಾಗಿ. ಸ್ವಾತಂತ್ರ್ಯದಿಂದ ಹೊಮ್ಮುತ್ತಿರುವ ಹೊಸ ಕವಿತ್ವದಲ್ಲಿ- ಅದರಲ್ಲಿಯೂ ಈ ಕಾಲದ ಮನೋಭಾವಗಳನ್ನು ಹಾಡಿ ತೋರಿಸುವ

ಭಾವಗೀತದಲ್ಲಿ– ಒಬ್ಬರ ಹಾಗೆ ಒಬ್ಬರಿರುವುದಿಲ್ಲ; ಒಬ್ಬರೇ ಇರುವುದಿಲ್ಲ ಒಂದೇರೀತಿ, ಒಂದೇ ಮಟ್ಟಿನಲ್ಲಿ. ಭಾವಗೀತೆಗಳಲ್ಲಿ ಸೌಂದರ್ಯ ಪರಿಪೂರ್ಣತೆಯನ್ನು ಪಡೆಯುವುದೂ ಸುಲಭವಲ್ಲ. ಏಕೆಂದರೆ, ಗೀತಕ್ಕೆ ಆತ್ಮವೆಂದು ಹೇಳಬಹುದಾದ ಆ ಮಾತಿನ, ಶೈಲಿಯ, ಭಾವದ, ರೀತಿಯ, ಛಂದಸ್ಸಿನ ಸಮ್ಮಿಳಿತ ಸೌಭಾಗ್ಯವನ್ನು ಸರಸ್ವತಿ ಮಿಂಚಿ ಬಂದು ಚಿಮ್ಮಿಹೊದಾಗ ಹೊರತು ಬಹುಕಾಲ ಸೆರೆಹಿಡಿದು ನಿಲ್ಲಿಸಿಕೊಳ್ಳುವುದು ಸಾಧ್ಯವಲ್ಲ. ಇದನ್ನು ಬಲ್ಲ ಸಹೃದಯರು ಹೊಸ ಬಗೆಯ ಗೀತ ಕವನಗಳನ್ನು ಸ್ನೇಹದೃಷಷ್ಟಿಯಿಂದಲೂ ಸಹಾನುಭೂತಿಯಿಂದಲೂ ಓದುವವರೇ ಆಗಿರುತ್ತಾರೆ.

ಈ ಗೀತೆಗಳಲ್ಲಿ ಸಂಗೀತ ಕ್ರಮದಲ್ಲಿ ಹಾಡತಕ್ಕುವು ಕೆಲವು; ಛಂದಸ್ಸಿಗನುಸಾರವಾಗಿ ಹೇಳತಕ್ಕುವು ಕೆಲವು. ಹೊಸ ಛಂದಸ್ಸುಗಳ ಆವಶ್ಯಕತೆಯನ್ನು ತಿಳಿದ ವಿಮರ್ಶಕರು ಇಲ್ಲಿ ಕೆಲವು ಸುಂದರ ರೂಪಗಳನ್ನು ಕಾಣಬಹುದಾಗಿದೆ. ಭಾಷೆಯಲ್ಲಿ ಒಂದು ಬಗೆಯ ಸರಳತೆ, ಓಜಸ್ಸು, ಗಾಂಭೀರ್ಯ ತುಂಬಿದೆ. ಯುವಕರ ರಕ್ತವನ್ನು ಕುದಿಸುವ ದೇಶಾಭಿಮಾನ ಮತ್ತು ಪ್ರೇಮ; ಪ್ರಕೃತಿಮಾತೆಯ ಭಯಂಕರವಾದ ಮತ್ತು ಸೌಮ್ಯವಾದ ದರ್ಶನಗಳು; ಋತುಗಳ ಕುಣಿತ; ದೇವತಾ ವಿಷಯದಲ್ಲಿ ಮನಸ್ಸನ್ನು ತೂಗಾಡಿಸುವ ಸಂದೇಹ, ಭಕ್ತಿ; ಪಾಪದ ಭಯ; ಧರ್ಮಪ್ರೀತಿ; ಮುಖ್ಯವಾಗಿ ಎಲ್ಲಾ ಕಡೆಯಲ್ಲಿಯೂ ಕಾಣುವ ಸೂಕ್ಷ್ಮವಾದ, ಉದಾರವಾದ, ನಿರ್ಮಲವಾದ ಮನಸ್ಸು– ಇವು ಸಹಾನುಭೂತಿಯಿಂದ ನೋಡತಕ್ಕವರಿಗೆ ಈ ಗೀತೆಗಳಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿವೆ. ಒಬ್ಬೊಬ್ಬರ ಅಭಿರುಚಿಗೆ ಒಂದೊಂದು ಬಗೆ ಸೊಗಸಬಹುದಾದರೂ ಸರ್ವರೂ ಮೆಚ್ಚತಕ್ಕ ರತ್ನಗಳು ಈ ಕವನಮಾಲೆಯಲ್ಲಿ ದೊರೆಯುವುದೆಂದು ನಾನು ನಂಬಿರುತ್ತೇನೆ.

ಈ ನಂಬಿಕೆಯಲ್ಲಿ ಈ ಗ್ರಂಥವನ್ನು ಕರ್ಣಾಟಕಾಭಿಮಾನಿಗಳ ಸನ್ನಿಧಿಯಲ್ಲಿ ಕವಿಯೂ ಕವಿಯ ಮಿತ್ರರೂ ನಮ್ರತೆಯಿಂದ ಅರ್ಪಿಸಿರುತ್ತಾರೆ.

[ವಿ. ಸೀ. ಅವರ 'ಗೀತಗಳು' ಕವನ ಸಂಕಲನಕ್ಕೆ ಬರೆದ ಮುನ್ನುಡಿ; ೧೯೩೧]

ಮುಕ್ತದ್ವಾರ

ಶ್ರೀ ಶಿವರಾಮಕಾರಂತರ 'ಮುಕ್ತದ್ವಾರ', 'ಮಂಗನ ಮದುವೆ, ಮುಂತಾದ ನಾಟಕಗಳನ್ನೂ, ಮೇಘಮಯೂರ ಶೀಲಭಂಗ ಮುಂತಾದ ನಾಟ್ಯಗಳನ್ನೂ ನೋಡಿದವರು ಒಂದು ಅಪೂರ್ವವಾದ ಅನುಭವವನ್ನೂ ಆನಂದವನ್ನೂ ಸವಿಯುವರು. ತಿಳಿಯಾದ ಭಾಷೆ, ಉದಾತ್ತವಾದ ಭಾವ, ಗಂಭೀರನಾಟ್ಯ, ಮನೋಹರಗಾನ– ಇವರ ಕಲೆಯಲ್ಲಿ, ಕವಿತೆಯಲ್ಲಿ ಇವೆಲ್ಲಾ ಹೊಂದಿಕೊಂಡು, ಕಿರಿದರಲ್ಲಿ ಹಿರಿದನ್ನು ತೋರಿಸಿ, ಎಷ್ಟು ಹಿತ, ಎಷ್ಟು ಮಿತ, ಏನು ರಮ್ಯ ಎಂಬುದಾಗಿ ನೋಟಕರನ್ನು ಆಶ್ಚರ್ಯಗೊಳಿಸುತ್ತದೆ.

ಕನ್ನಡನಾಡಿನ ದಿವ್ಯಕ್ಷೇತ್ರದಲ್ಲಿ ನಮ್ಮ ಹಿರಿಯರು ಅನೇಕ ಕಲಾಕವಿತಾ ಬೀಜಗಳನ್ನು ಚೆಲ್ಲಿ ಹೋಗಿರುವರು. ಹೊಸ ಉಸಿರು ಕನ್ನಡ ತಾಯ ಮಕ್ಕಳಲ್ಲಿ ಮೂಡಿದಾಗೆಲ್ಲಾ, ಅವು ಮತ್ತೆ ಮೊಳೆತು, ಚಿಗುರಿ, ಬಗೆ ಬಗೆಯ ಹೂವುಗಳನ್ನು ಹೊಮ್ಮಿಸಿ, ಹೊಸ ಮಿರುಗಿನಿಂದ ಮೆರೆಯುವುವು. ಯಕ್ಷಗಾನದ ಬಯಲಾಟದ ಸೊಬಗನ್ನು ತಮ್ಮ ಸರಸ್ವತೀ ಪ್ರಸನ್ನ ದೃಷ್ಟಿಯಿಂದ ಕಾರಂತರು ಮತ್ತೆ ಹೊಮ್ಮಿಸಿ, ಹೊಸ ಕಾಂತಿಯನ್ನು, ಹೊಸ ಜೀವವನ್ನೂ ಹೊಯ್ದು ಬೆಳಸುತ್ತಿರುವರು.

'ಮುಕ್ತದ್ವಾರ'ದಲ್ಲಿ ಅವರ ನೋಟ, ಹಾಡು, ಕುಣಿತ, ಹಕ್ಕಿಹಾರು– ಏನೆಂದರೆ ಕಾಲಚಕ್ರ ಹೊರಳುತ್ತಿದೆ, ಯುಗ ಮರಳುತ್ತಿದೆ. ಧರ್ಮಪುರುಷರು ಕಾಲಪುರುಷನ ಮೃತಿಯಲ್ಲಿ ಅಮೃತವನ್ನು ಹಿಂಡುತ್ತಿದ್ದಾರೆ. ಪ್ರೇಮ ನಿರ್ಮಲ ಜನ್ಮವನ್ನು ಬಿತ್ತಿ, ಆನಂದ ಮುಕ್ತಿಯನ್ನು ಕೊಯಲು ಮಾಡುತ್ತಿದ್ದಾರೆ. ಯಾಜ್ಞವಲ್ಕ್ಯ, ಶ್ರೀಕೃಷ್ಣ, ಬುದ್ಧ, ಏಸುಕ್ರಿಸ್ತ, ಮಹಮ್ಮದ್, ಜರತುಷ್ಟ್ರ ಮುಂತಾದ ದಿವ್ಯಜ್ಞಾನಿಗಳ ಅವತಾರ ಬರುತ್ತದೆ, ಹೋಗುತ್ತದೆ. ಧರ್ಮದ ಕಾವು ಏರುತ್ತದೆ, ಇಳಿಯುತ್ತದೆ. ಕಾಲನ ತೆರೆ ಬೀಳುತ್ತದೆ, ಏಳುತ್ತದೆ. ಅವನ ತುಳಿತದಲ್ಲಿ, ಕಾಲಾಟದಲ್ಲಿ ಕೊಳೆಯುವುದು ಅಳಿಯುತ್ತದೆ; ಬೆಳೆಯುವುದು ಉಳಿದು, ಒಳ್ಳೆಯದು ಎಲ್ಲಾ ಕಡೆಯಿಂದಲೂ ಕೂಡಿಕೊಂಡು, ನಿತ್ಯಜೀವದ ಬದುಕಾಗುತ್ತಿದೆ. ಅನಂತ ಸಂತಾನದಲ್ಲಿ ಮಾನವನಿಗೆ ಯಾವ ಅಚ್ಚರಿಯ ಬಾಳು ಹುದುಗಿದೆಯೋ ಯಾರು ಬಲ್ಲರು!

ಈ ಪುಟ್ಟ ನಾಟ್ಯ ನಾಟಕವನ್ನು ಓದುವುದೇ ಒಂದು ನಲಿವು. ಆದರೆ ಓದು ಸಾಲದು; ಕಣ್ಣು ನೋಡಬೇಕು, ಕಿವಿ ಕೇಳಬೇಕು, ಕಾರಂತರೇ ಕುಪ್ಪಿಕುಣಿದು, ಆಡಿಹಾಡಿ ಮುಕ್ತದ್ವಾರಕ್ಕೆ ನಮ್ಮನ್ನು ಸೆಳೆದೊಯ್ಯಬೇಕು. ಆ ಭಾಗ್ಯ ನನಗೆ ಲಭಿಸಿದೆ. ಕನ್ನಡಿಗರೆಲ್ಲರಿಗೂ ಆ ಭಾಗ್ಯ ಲಭಿಸಲೆಂದು ಬಯಸುತ್ತೇನೆ.

ಧರ್ಮಸ್ಥಾಪಕರನ್ನು ಕುರಿತು ಉಪನ್ಯಾಸ ಮಾಡಿ ಆನಂದಪಡುವವನ ಹೆಸರನ್ನು ತಮ್ಮ ಉತ್ಕೃಷ್ಟ ಕಲೆಯೊಡನೆ ಸೇರಲು ಅವಕಾಶಕೊಟ್ಟ ಶ್ರೀಕಾರಂತರ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ಭಗವಂತನು ಅವರ ತೇಜಸ್ಸನ್ನು ಹೆಚ್ಚಿಸಲಿ.

[ಶಿವರಾಮ ಕಾರಂತರ 'ಮುಕ್ತದ್ವಾರ' ಎಂಬ ಗೀತನಾಟಕಕ್ಕೆ ಬರೆದ ಮುನ್ನುಡಿ; ೧೯೩೪.]

ನಾಡಹಬ್ಬ

ಓದಿ ಬಹಳ ಸಂತೋಷವಾಯಿತು. ನಿಮ್ಮ ಗುರಿ
ದೊಡ್ಡದು. ದೊಡ್ಡ ರೀತಿಯಲ್ಲಿ ತಿಳಿಸಿದ್ದೀರಿ.
ಆ ಗುರಿ ಎಲ್ಲರಲ್ಲೂ ಮೂಡಲಿ.

[ರಾ. ಗು. ಜೋಶಿಯವರ 'ನಾಡಹಬ್ಬ' ಎಂಬ ನಾಟಕಕ್ಕೆ ಬರೆದದ್ದು; ೧೭–೧೦–೧೯೩೭]

ಕನ್ನಡ ಒಂದನೆಯ ಪುಸ್ತಕ

ಈಗ ಬಳಕೆಯಲ್ಲಿರುವ ಬಾಲಬೋಧೆಯನ್ನೂ ರೀಡರುಗಳನ್ನೂ ಪರಿಷ್ಕರಿಸಿ ಹೊಸ ಪುಸ್ತಕಗಳನ್ನು ಸಿದ್ಧಪಡಿಸಲು ವಿದ್ಯಾಶಾಖೆಯ ಅಧಿಕಾರಿಗಳು ಒಂದು ಸಮಿತಿಯನ್ನು ನೇಮಿಸಿದರು. ಅದರ ಸದಸ್ಯರು ಯಾರಿಂದರೆ:

ಶ್ರೀಮಾನ್‌ಗಳಾದ ಬಿ. ಎಂ. ಶ್ರೀಕಂಠಯ್ಯನವರು (ಅಧ್ಯಕ್ಷ), ಚ. ವಾಸುದೇವಯ್ಯನವರು, ಕೆ.ನಾರಾಯಣರಾಯರು, ಡಿ.ಕೆ. ಭಾರದ್ವಾಜರವರು, ದೇವುಡು ನರಸಿಂಹಶಾಸ್ತ್ರಿಗಳು, ಕೆ. ಸಂಪದ್ಗಿರಿರಾಯರು, ಎಸ್. ಜಿ. ಶಾಸ್ತ್ರಿಗಳು, ಎಂ.ಆರ್. ಶ್ರೀನಿವಾಸಮೂರ್ತಿಗಳು.

ಬಾಲಬೋಧೆಯನ್ನೂ, ಈ ಒಂದನೆಯ ಪುಸ್ತಕವನ್ನೂ ಮಕ್ಕಳು ಒಂದು ವರ್ಷದಲ್ಲಿ ಮುಗಿಸಬೇಕೆಂದು ಏರ್ಪಡಿಸಿ ಬರೆದಿದೆ.

ಪಾಠಗಳು ಹಳ್ಳಿಗಳ ಮತ್ತು ಪಟ್ಟಣಗಳ ಮಕ್ಕಳ ಅನುಭವಕ್ಕೆ ಒಳಪಟ್ಟ ವಿಷಯಗಳೇ ಆಗಿವೆ. ಮಕ್ಕಳ ಮನಸ್ಸಿಗೆ ಹಿಡಿಸುವ, ಮಕ್ಕಳ ಮನಸ್ಸನ್ನು ಸೆಳೆಯುವ ಕಥೆಗಳು, ಕನ್ನಡ ನಾಡಿನ ಬಾಳು ಬದುಕುಗಳು, ಸುತ್ತುಮುತ್ತು, ನೀತಿ ಇವುಗಳನ್ನು ಒಳಗೊಂಡಿವೆ. ಹಾಡುಗಳು ಮಕ್ಕಳು ಹಾಡುವುದಕ್ಕೆ ತಕ್ಕಂತಿರುವ ನಾಡುಪದಗಳ ಜಾತಿಯವಾಗಿವೆ.

ಪ್ರಶ್ನೆಗಳು ಪಾಠಗಳ ಮುಖ್ಯಾಂಶಗಳನ್ನು ಮಕ್ಕಳು ತಿಳಿದುಕೊಂಡರೇ ಇಲ್ಲವೇ ಪರೀಕ್ಷಿಸುವುದಕ್ಕಾಗಿ ಕೊಟ್ಟಿವೆ. ಕೆಲವು ಹೆಚ್ಚಿಗೆ ಶಬ್ದಗಳು ಮಕ್ಕಳ ಜ್ಞಾಪಕದಲ್ಲಿ ನಿಲ್ಲುವಂತೆ ಅರ್ಥ ಕೇಳಿದೆ. ವ್ಯಾಕರಣದಲ್ಲಿ, ಮೊದಲನೆಯ ವರ್ಷದ ಕೊನೆಯ ಹೊತ್ತಿಗೆ ನಾಮಪದ, ಸರ್ವನಾಮ, ಕ್ರಿಯಾಪದ, ಏಕವಚನ, ಬಹುವಚನ; ಕ್ರಿಯಾಪದವುಳ್ಳ ವಾಕ್ಯ, ಕ್ರಿಯಾಪದವಿಲ್ಲದ ವಾಕ್ಯ, ಸಾಧಾರಣ ವಾಕ್ಯರಚನೆ- ಪಾಠದ ಸಾರಾಂಶವನ್ನು ತಮ್ಮ ಮಾತಿನಲ್ಲಿ ಹೇಳುವುದು, ಬರೆಯುವುದು, ಬರೆಯುವ ಚಿಹ್ನೆಗಳನ್ನು ಬಳಸುವುದು- ಇಷ್ಟು ಅಂಶಗಳನ್ನು ಪಾಠಗಳ ಸಹಾಯದಿಂದ ಉಪಾಧ್ಯಾಯರು ಕಲಿಸಬೇಕೆಂದು ಉದ್ದೇಶಪಟ್ಟಿದೆ. ಮಕ್ಕಳ ಕೈಯಲ್ಲೇ ಕೆಲಸ ಮಾಡಿಸುವುದಕ್ಕೂ ಅವರ ಬುದ್ಧಿಯನ್ನು ಕುದುರಿಸುವುದಕ್ಕೂ ಅಲ್ಲಲ್ಲಿ ಅವಕಾಶ ಬಿಟ್ಟಿದೆ.

ಹಾಡುಗಳನ್ನು ಸರಿಯಾದ ಧಾಟಿಯಲ್ಲಿ ಅಭಿನಯದೊಡನೆ, ಮೇಳದಲ್ಲಿ ಹಾಡಿಸುವುದು ಮುಖ್ಯ. ಅವುಗಳ ಒಟ್ಟು ಸಾರಾಂಶ, ಭಾವ- ಇಷ್ಟು ಹೇಳಿಕೊಟ್ಟರೆ ಸಾಕು.

[ಮೈಸೂರು ವಿದ್ಯಾಭ್ಯಾಸದ ಇಲಾಖೆಯ 'ಕನ್ನಡ ಒಂದನೆಯ ಪುಸ್ತಕ'ಕ್ಕೆ ಬರೆದ ಮುನ್ನುಡಿ; ೧೯೩೭.]

ಪ್ರಭುವರ್ಯರ ಯೂರೋಪ್ ಪ್ರವಾಸ

ಈ ಸಣ್ಣ ಪುಸ್ತಕದಲ್ಲಿ ಮಹಾಪ್ರಭುಗಳ ವಿಲಾಯತಿಯ ಪ್ರವಾಸವನ್ನು ಶ್ರೀಮಾನ್ ಆರ್.ಎಸ್. ನಾರಾಯಣರಾಯರು ಬಹು ಕೌಶಲದಿಂದ ಚಿತ್ರಿಸಿದ್ದಾರೆ. ವಿಷಯಕ್ಕೆ ತಕ್ಕಂತೆ ಶೈಲಿ ಗಂಭೀರವಾಗಿಯೂ ಸರಳವಾಗಿಯೂ ಇದೆ. ವಿಶ್ರಾಂತಿಸುಖವನ್ನು ಅನುಭವಿಸುವಾಗ ಕೂಡ ಶ್ರೀಮಾನ್ ಮಹಾರಾಜರವರು ಪ್ರಜೆಗಳ ಏಳಿಗೆಯನ್ನು ಧ್ಯಾನಿಸುತ್ತಿರುವರೆಂಬುದನ್ನೂ, ಅವರಲ್ಲಿ ದೊಡ್ಡ ದೊಡ್ಡವರಿಗೆ ಕೂಡ ಎಷ್ಟು ಗೌರವವಿದೆ ಎಂಬುದನ್ನೂ ಇಲ್ಲಿ ಚೆನ್ನಾಗಿ ನೋಡಬಹುದು. ತಮ್ಮ ದೊರೆಗಳು ರಾಜರ್ಷಿಗಳೆಂದೂ, ಕರ್ಮವೀರರೆಂದೂ. ಪ್ರಜಾವತ್ಸಲರೆಂದೂ ನಂಬಿರುವ ಅವರ ಪ್ರಜೆಗಳು ಈ ಪುಸ್ತಕವನ್ನು ಹೆಮ್ಮೆಪಟ್ಟುಕೊಂಡು ಓದುವರೆಂದು ನಿಸ್ಸಂದೇಹವಾಗಿ ಹೇಳಬಹುದು.

[ಆರ್. ಎಸ್. ನಾರಾಯಣರಾವ್ ಅವರ 'ಪ್ರಭುವರ್ಯರ ಯೂರೋಪ್ ಪ್ರವಾಸಕ್ಕೆ ಬರೆದ ಮುನ್ನುಡಿ; ೧೯೩೭.]

ಹೊನಲು

ಶ್ರೀ ಆನಂದಮೂರ್ತಿಯವರ ಹೃದಯವನ್ನು ಸರಸ್ವತಿ ಮೀಟುತ್ತಿರುವಳು: ಅವರು ವೀಣೆಯನ್ನು ಮೀಟುತ್ತಿರುವರು. ಸೌಂದರ್ಯ ಮತ್ತು ಪ್ರೇಮ, ಚೆಲುವು, ಒಲವು,- ಮೊದಲು ಈ ಸ್ವರಗಳು ಹೊರಡದ ಎಳೆಯ ಕವಿ ಯಾರು? ಹಿಂದೆಯೇ ಜೀವನದ ದುಃಖದ ಹೊನಲು ಸುಖದ ಹೊನಲಿನ ಕೂಡ ಕೂಡಿ ನೆರೆಯಾಗಿ ಹರಿಯದ ಎದೆಯೂ ಉಂಟೆ? ಸಾವು, ನೋವು, ಕಾವು-ಪ್ರಕೃತಿಯ ರಮ್ಯತೆಯೊಡನೆಯೇ ಅದರ ಕ್ರೌರ್ಯ, ಕಲ್ಲೆದೆ- ಆಮೇಲೆ ಪರಮಾರ್ಥದ ಹುಡುಕು,- ಭಕ್ತಿ ಶಾಂತಿಗಳ ನೆಲೆ, ಬಾಳ ಸದ್ವಿನಿಯೋಗ, ನಿಸ್ವಾರ್ಥ, ಹಿರಿದರಲ್ಲಿ ಕಿರಿದನ್ನು ಹೊಂದಿಸಿ ದೊಡ್ಡ ಬಾಳು ಬದುಕುವುದು- ಈ ಗಂಭೀರ ಸ್ವರಗಳೂ ಹೊಮ್ಮುತ್ತಿವೆ. ಕನ್ನಡ ನಾಡು ನುಡಿಗಳ, ಭಾರತದ, ಹೋರಾಟದ ವೇದನೆ ಇವೆ. ಸರಳವಾದ ತಿಳಿಗನ್ನಡ ನಡೆ ಇದೆ. ಕನ್ನಡಿಗರು ಮೂರ್ತಿಯವರ ಹೃದಯವನ್ನು ಸಹೃದಯರಾಗಿ ತಿಳಿದು ನಲಿಯಲೆಂದು ನನ್ನ ಹಾರೈಕೆ.

ನನ್ನನ್ನು ಒಂದೆರಡು ಮಾತು ಹೇಳಬೇಕೆಂದು ಕೇಳಿದ್ದಕ್ಕಾಗಿ ನನ್ನ ನೆನಕೆ.

[ಮೂರ್ತಿ ಅವರ 'ಹೊನಲು' ಕವನ ಸಂಕಲನದ ಮುನ್ನುಡಿ; ೨೦-೧೧-೧೯೩೮]

ಕನ್ನಡ ಮೂರನೆಯ ಪುಸ್ತಕ

ಈಗ ಬಳಕೆಯಲ್ಲಿರುವ ಬಾಲಬೋಧೆಯನ್ನೂ ರೀಡರುಗಳನ್ನೂ ಪರಿಷ್ಕರಿಸಿ ಹೊಸ ಪುಸ್ತಕಗಳನ್ನು ಸಿದ್ಧಪಡಿಸಲು ವಿದ್ಯಾಶಾಖೆಯ ಅಧಿಕಾರಿಗಳು ಒಂದು ಸಮಿತಿಯನ್ನು ನೇಮಿಸಿದರು. ಅದರ ಸದಸ್ಯರು ಯಾರೆಂದರೆ:

ಶ್ರೀಮಾನ್‌ಗಳಾದ ಬಿ.ಎಂ. ಶ್ರೀಕಂಠಯ್ಯನವರು (ಅಧ್ಯಕ್ಷರು), ಚ. ವಾಸುದೇವಯ್ಯನವರು, ಕೆ. ನಾರಾಯಣರಾಯರು, ಡಿ.ಕೆ. ಭಾರದ್ವಾಜರವರು, ದೇವುಡು ನರಸಿಂಹಶಾಸ್ತ್ರಿಗಳು, ಕೆ. ಸಂಪದ್ಗಿರಿರಾಯರು, ಎಸ್. ಜಿ. ಶಾಸ್ತ್ರಿಗಳು, ಎಂ.ಆರ್. ಶ್ರೀನಿವಾಸಮೂರ್ತಿಗಳು.

ಎಲ್ಲಾ ಪುಸ್ತಕಗಳ ಕವಿತೆಗಳ ಆಯ್ಕೆಯನ್ನು ಸಮಿತಿಯವರು ಅಧ್ಯಕ್ಷರಿಗೆ ಒಪ್ಪಿಸಿದರು.

ಉಪಾಧ್ಯಾಯರಲ್ಲಿ ವಿಜ್ಞಾಪನೆ

ಈ ಸೂಚನೆಗಳನ್ನು ಗಮನಿಸಬೇಕು:

೧. ೬೦ ಪಾಠಗಳಲ್ಲಿ ಕಡೆಗೆ ೩೦ ಪಾಠಗಳನ್ನು ಚೆನ್ನಾಗಿ ಹೇಳಿಕೊಟ್ಟರೆ ಸಾಕು. ಮಕ್ಕಳು ಮನೆಯಲ್ಲಿ

ತಾವೇ ಓದಿಕೊಳ್ಳಲೆಂದೂ, ಅಕ್ಷರಸ್ಥರಾಗಬೇಕೆಂಬ ಕುತೂಹಲವುಳ್ಳ ಹಿರಿಯರಿಗಾಗಿಯೂ, ಹೆಚ್ಚು ಪಾಠಗಳನ್ನು ಕೊಟ್ಟಿದೆ.

೨. ಪಾಠಗಳನ್ನು ಮಕ್ಕಳಿಂದ ಓದಿಸಿ. ಸ್ಪಷ್ಟವಾದ ಉಚ್ಚಾರಣೆ, ಎಲ್ಲೆಲ್ಲಿ ನಿಲ್ಲಿಸಬೇಕೋ ಅಲ್ಲಿ ನಿಲ್ಲಿಸುವುದು,

ತಿಳಿಯದ ಮಾತುಗಳಿಗೆ ಸರಿಯಾದ ಅರ್ಥ, ಪಾಠದ ಒಟ್ಟು ಸಾರಾಂಶ ಮನಸ್ಸಿಗೆ ಇಳಿಯುವುದು. ಅದರ ಮೇಲೆ ಮಕ್ಕಳು ತಮ್ಮ ಮಾತಿನಲ್ಲಿ ವಾಕ್ಯ ಕಟ್ಟಿಹೇಳುವುದು– ಈ ಗುರಿಯಿಟ್ಟು ಪಾಠಗಳನ್ನು ಕಲಿಸಿ.

೩. ಒಂದಕ್ಕೊಂದು ಸಂಬಂಧಪಟ್ಟ ಪಾಠಗಳನ್ನು ಮುಗಿಸಿದಮೇಲೆ, ಒಟ್ಟುಗೂಡಿಸಿ ಅವನ್ನು ಓದುವಂತೆ ಹೇಳಿ.

ಆಗಾಗ್ಗೆ ಪಾಠದ ವಿಷಯವನ್ನು ಹುಡುಗರು ಸಂವಾದರೂಪದಲ್ಲಿ ಹೇಳುವಂತೆ ಮಾಡಿಸಿ.

೪. ವಾಕ್ಯರಚನೆಗೆ ಮನದಟ್ಟಾಗುವ ಮಟ್ಟಿಗೆ ಪ್ರಶ್ನೆಗಳಲ್ಲಿ ಹೇಳಿರುವ ವ್ಯಾಕರಣಾಂಶಗಳನ್ನು ತಿಳಿಸಿಕೊಡಿ.

ಹೆಚ್ಚಿಗೆ ಹೇಳಿ ಬೇಸರ ಪಡಿಸಬೇಡಿ.

೫. ಹುಡುಗರು ತಿಳಿಯದ ಕಡೆ ಪ್ರಶ್ನೆಗಳನ್ನು ಕೇಳುವಹಾಗೆ ಪ್ರೋತ್ಸಾಹಿಸಿ, ನೀವೂ ಪ್ರಶ್ನೆಗಳನ್ನು ಹಾಕಿ

ಮುಖ್ಯಾಂಶಗಳನ್ನು ಅವರ ನೆನಪಿನಲ್ಲಿ ನಿಲ್ಲಿಸಿ.

೬. ಕವಿತೆಗಳನ್ನು ಹುಡುಗರು ಬಾಯಿಪಾಟಮಾಡಿ, ಒಬ್ಬೊಬ್ಬರಾಗಿಯೂ, ಒಟ್ಟಿಗೆ ಮೇಳದಲ್ಲಿಯೂ ಹಾಡಲಿ, ತಕ್ಕ ಮತ್ತು ಮಿತವಾದ ಅಭಿನಯದೊಡನೆ ಹಾಡಲಿ. ಆಯಾ ಕವಿತೆಯ ಛಂದಸ್ಸಿಗೆ ಒಪ್ಪುವ ಮಟ್ಟಿನಲ್ಲಿ ಅದನ್ನು ಹಾಡುವುದನ್ನು ಹೇಳಿಕೊಡಿ.

೭. ಒಟ್ಟಿನಲ್ಲಿ, ಕನ್ನಡನಾಡಿನ ಚಿನ್ನದಂತಹ ಮಕ್ಕಳು ನಿಮ್ಮ ಕೈಯಲ್ಲಿವೆ. ತಾಯಿತಂದೆಗಳಂತೆ ಅಕ್ಕರೆಯಿಂದ

ಸಂತೋಷದಲ್ಲಿ ಅವರನ್ನು ಬೆಳಸಿ, ಎಳೆಯ ಮನಸ್ಸಿನಮೇಲೆ ಹೆಚ್ಚು ಹೊರೆಯನ್ನು ಹೇರದೆ, ಆಟಪಾಟಗಳಿಂದ ನಲಿಸಿ, ಕಲಿಸಿ.

[ಮೈಸೂರು ವಿದ್ಯಾಭ್ಯಾಸದ ಇಲಾಖೆಯ 'ಕನ್ನಡ ಮೂರನೆಯ ಪುಸ್ತಕ'ಕ್ಕೆ ಬರೆದ ಮುನ್ನುಡಿ; ೧೯೩೮]

ಕರ್ಣ

"ನೆನೆಯದಿರಣ್ಣ ಭಾರತದೊಳಿನ್ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ. . ."
–ಎಂದು ನಮ್ಮ ನಾಡೋಜ ಆದಿಕವಿ ಪಂಪನು ಹೇಳಿದನು: ಕಾರಣ?
ಕರ್ಣನೊಳಾರ್ ದೊರೆ ಕರ್ಣನೇಱು ಕ

ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ!

ನಮ್ಮ ಕೊಡಗಿನ ಕವಿ, ಕವಿತ್ವದಲ್ಲಿ ಕೈ ಪಳಗಿದ ತರುಣಕವಿ, ಆ ವೀರ, ದಾನಶೂರ, ದುರಂತ ಸಂಸಾರ ಕರ್ಣನನ್ನು ಚಿತ್ತಫಲಕದಲ್ಲಿ ಮತ್ತೊಮ್ಮೆ ಚಿತ್ರಿಸಿಕೊಂಡು, ತಮ್ಮ ಯೌವನದ ಹುರುಪನ್ನು ತುಂಬಿ ನಮ್ಮ ಆನಂದಕ್ಕಾಗಿ ನೀಡಿದ್ದಾರೆ. ಪಂಪ– ನಾರಣಪ್ಪರ ಆಶ್ರಯದಲ್ಲಿ ಈ ಎಳದುಂಬಿ ರಸವನ್ನು ಕುಡಿದು, ತಾವು ತಮ್ಮದಾಗಿ ಮಾಡಿಕೊಂಡ ಹೊಸ ಜೇನನ್ನು ಕನ್ನಡಿಗರ ಸವಿಗಾಗಿ ಸೂಸಿದ್ದಾರೆ. ಕೊಡಗಿನ ಮಲೆಗಳ, ಪೊನ್ನಂಪೇಟೆಯ ತಿಳಿಜೇನು! ನುಡಿಗಳು, ಬಗೆಗಳು, ಶೈಲಿ, ಒಟ್ಟುನೋಟ ಹಿರಿಯ ಕವಿಗಳ ಶುಶ್ರೂಷೆಯಿಂದ ಸಾಧಿಸಿದ ಗಾಂಭೀರ್ಯದಿಂದ ಕೂಡಿವೆ.

ಜಗದ್ವಿಖ್ಯಾತ ಆರ್ಷಭಾರತದ ಮಹವೀರರನ್ನು ಆತ್ಮದಲ್ಲಿ ಕುಣಿಸಿ ಪೌರುಷದ ಘನತೆಗೇರುತ್ತಿರುವ ಈ ಹೊಸಲೋಕದ **ಭಾವುಕ**ರಿಗೆ ಇಂತಹ ಕೆಚ್ಚಿನ ಬಿಂಬನಗಳು ಪ್ರಿಯವಾಗದಿರವು. ಮುಪ್ಪು ಅಪ್ಪುತ್ತಿರುವ ನನ್ನಂತಹ ಕವಿಶಿಷ್ಯರಿಗೆ ಇಂತಹ ಎಳಮೆಯ ವೀರಕವಿಗಳನ್ನು ಹರಸಿ, ಅವರಿಂದ ಕನ್ನಡತಾಯಿಗೆ ಹೆಚ್ಚಿನ ಸೇವೆ ನಡೆಯಲಿ ಎಂದು ಭರವಸೆಯಿಂದ ಬಯಸುವ ಆನಂದಕ್ಕಿಂತ ದೊಡ್ಡದು ಯಾವುದು?

ಸಹ ವೀರ್ಯಂ ಕರವಾವಹೈ!

[ಎಂ. ಎಸ್. ಅನಂತಪದ್ಮನಾಭರಾವ್ ಅವರ 'ಕರ್ಣ' ಪುಸ್ತಕಕ್ಕೆ ಬರೆದ ಮುನ್ನುಡಿ; ೨–೮–೧೯೩೯]

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರು

ಭಾರತ ಭೂಮಿಯ ಚರಿತ್ರೆಯಂತೆಯೇ ಮೈಸೂರಿನ ಚರಿತ್ರೆಯೂ ಹಿಂದೂ, ಮುಸಲ್ಮಾನ್, ಬ್ರಿಟಿಷ್ ಈ ಮೂರು ಪ್ರಭಾವಗಳೂ ಸೇರಿ ಮುಪ್ಪುರಿಗೊಂಡಿದೆ. ಈ ಸಾಂಸ್ಕೃತಿಕ ಮತ್ತು ರಾಜಕೀಯ ರೀತಿನೀತಿಗಳ ಹಿನ್ನೆಲೆಯಲ್ಲಿ ಪುಣ್ಯಶ್ಲೋಕರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಭವ್ಯಚರಿತ್ರೆಯನ್ನು ಶ್ರೀ ಓ.ಎನ್. ಲಿಂಗಣ್ಣಯ್ಯ, ಬಿ.ಎ. (ಆನರ್ಸ್) ಅವರು ಈ ಚಿಕ್ಕ ಪುಸ್ತಕದಲ್ಲಿ ಸಂಕ್ಷೇಪವಾಗಿ ಚತುರತೆಯಿಂದ ಚಿತ್ರಿಸಿದ್ದಾರೆ.

ಮಹಾನುಭಾವರಾದ ಕಥಾನಾಯಕರ ಜೀವನಚರಿತ್ರೆಯಲ್ಲಿ ಎರಡು ಮೂರು ಅಂಶಗಳು ಎದ್ದುಕಾಣುವುವು:

೧. ಹಿಂದನೆಯ ಶತಮಾನದ ಭಾರತದ, ಮೈಸೂರಿನ ಕಲಕಿಹೋದ ಪರಿಸ್ಥಿತಿ; ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ಹೋರಾಟ; ನಾಡಿನಲ್ಲಿ ಒಕ್ಕಟ್ಟು ಒಗ್ಗುರಿಗಳಿಲ್ಲದೆ ಜನಶಕ್ತಿ ಛಿನ್ನಭಿನ್ನವಾಗಿದ್ದುದು.

೨. ಇಂತಹ ಶಾಂತಿಯಿಲ್ಲದ ಕಡಲಲೆಗಳ ಹೊಡೆತದಲ್ಲಿ, ಹಡಗು ನಡಸುವ ನಾಯಕರ ಮನೋಧರ್ಮ; ಘನವ್ಯಕ್ತಿತ್ವ; ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ತೇಜಸ್ಸು ಕೂಡಿದ ಬಿಂಬ ಈ ಅವಾಂತರ ಸನ್ನಿವೇಶದಲ್ಲಿ ಧ್ರುವನಕ್ಷತ್ರದಂತೆ ಹೊಳೆಯುತ್ತಿರುವುದು. ಅವರ ಧೈರ್ಯ, ಸ್ಥೈರ್ಯ, ಗಾಂಭೀರ್ಯಗಳು, ಅವರ ಸಾತ್ವಿಕತೆ, ದೈವಭಕ್ತಿ, ದಾನಧರ್ಮಬುದ್ಧಿ; ಅವರ ಪ್ರಜಾಪ್ರೇಮ, ಸಹನೆ, ಸಾಹಿತ್ಯ ಸಂಗೀತ ಕಲೆಗಳ ಉಪಾಸನೆ; ಅವರ ಮೈತ್ರಿ, ಅವರ ಸೌಜನ್ಯತೆ, ಅವರ ಹಾಸ್ಯ ವಿನೋದಗಳು– ಕಾಲ ಹೇಗಾದರೂ ಇರಲಿ; ಪುರುಷಗುಣ ಮುಖ್ಯವೆನ್ನುವುದನ್ನು ನಮಗೆ ಬೋಧಿಸುವ ಪೂಜ್ಯ ವ್ಯಕ್ತಿತ್ವವದು. ಅವರ ಹೆಸರು ಹಸುರಾಗಿ ಇಂದಿಗೂ– ಎಂದಿಗೂ ಹಳ್ಳಿ ಹಳ್ಳಿಗಳಲ್ಲಿ ದಂತಕಥೆಗಳಲ್ಲಿ ಅಂಟಿಕೊಂಡಿರುವುದು; ಕರ್ನಾಟಕದೊಳಗೆ ಹೊರಗೆ, ತಂಗಾಳಿಯಲ್ಲಿ ಹಬ್ಬಿ ಕಂಪು ಬೀರುತ್ತಿರುವುದು.

೩. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಘನತೆಯ ವ್ಯಕ್ತಿತ್ವ ರಾಜಕೀಯದ ಬಿಕ್ಕಟ್ಟಿನ ಸಮಸ್ಯೆಯಲ್ಲಿ ಯಾವ ರೀತಿ ಕಾರ್ಯನಿರ್ವಾಹ ಮಾಡಿ ಜಯಸಾಧನೆಗೊಂಡಿತೆಂದು ಪರಿಶೀಲಿಸುವುದು ಒಂದು ಆನಂದ, ದೊಡ್ಡ ಸ್ಫೂರ್ತಿ, ಬ್ರಿಟಿಷರು ಕೊಟ್ಟ ರಾಜ್ಯವನ್ನು, ಬ್ರಿಟಿಷರು ತೆಗೆದುಕೊಂಡರು. ಹಿಂದೂ ಮುಸಲ್ಮಾನ್ ಪ್ರಭುಗಳು ವಿಸ್ತರಿಸಿ ಒಂದುಮಾಡಿದ ವಿಜಯನಗರ ಶಿಖರದಿಂದ ಉರುಳಿದ್ದ, ಕರ್ನಾಟಕ ಮತ್ತೆ ಹೊಮ್ಮಿ ಚಿಮ್ಮುತ್ತಿತ್ತು. ಮತ್ತೆ ಹರಿಯಿತು, ಹಂಚಿತು. ಸ್ವತಂತ್ರ ದೇಶೀಯ ಸಂಸ್ಥಾನದ ರಾಜಮನೆತನದ ತನ್ನ ಪಿತ್ರಾರ್ಜಿತವನ್ನು ಮತ್ತೆ ಕಳೆದುಕೊಂಡಿತು. ಈ ಸಂಕಟದಲ್ಲಿ ಸತ್ಯವೇ ಬಲವೆಂದು ನಂಬಿ, ಸತ್ಯ ಮತ್ತು ಅಹಿಂಸೆ, ನ್ಯಾಯ ಮತ್ತು ಶಾಂತಿ ಸರಳತೆ ಮತ್ತು ಸ್ವಾಮಿನಿಷ್ಠೆ– ಈ ಸಾತ್ವಿಕಮಾರ್ಗವೇ ಶ್ರೇಯಸ್ಕರವೆಂದು ದೃಢಸಂಕಲ್ಪ ಮಾಡಿ, ಬ್ರಿಟಿಷರೊಡನೆ ಧರ್ಮಯುದ್ಧವನ್ನು ಹೂಡಿ, ಪ್ರೇಮದಿಂದ ಹೋರಾಡಿ, ಹೋದ ರಾಜ್ಯವನ್ನು ಮತ್ತೆ ತಮ್ಮ ವಂಶಕ್ಕೆ ಬದುಕಿಸಿಕೊಂಡರು. ಸಾತ್ವಿಕ ಶಿರೋಮಣಿಗಳಾದವರು, ರಾಜರ್ಷಿಗಳಾದವರು, ಸಾತ್ವಿಕ ಬಲವನ್ನೇ ಪ್ರಯೋಗಿಸಿ ಕಾರ್ಯಸಿದ್ಧಿಯನ್ನು ಪಡೆದರು, ಪಡೆಯುವರು.

"ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ".

ಈಗಿನ ಹೋರಾಟದ ಭಾರತವೂ. ಒಕ್ಕೂಟದ ಕನಸುಗಳನ್ನು ಕಾಣುತ್ತಿರುವ ಕರ್ನಾಟಕವೂ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ದಿವ್ಯವಾದ ಮಹಾವ್ಯಕ್ತಿಯನ್ನೂ ಅವರು ತೋರಿಸಿ ಕೊಟ್ಟಿರುವ ಮಹಾಪಥವನ್ನೂ ಮನಸ್ಸಿಗೆ ತಂದುಕೊಂಡು ಕೃತಾರ್ಥರಾಗಬಹುದಲ್ಲವೆ?

ಉತ್ತಮ ವಿಷಯಗಳನ್ನೊಳಗೊಂಡಿರುವ ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

[ಓ.ಎನ್. ಲಿಂಗಣ್ಣಯ್ಯ ಅವರ 'ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರು' ಪುಸ್ತಕದ ಮುನ್ನುಡಿ; ೧೬-೧-೧೯೪೦]

ಹಿಂದೂದರ್ಶನಸಾರ

ಈ ಗ್ರಂಥವನ್ನು ಬರೆದ ಮಹಾಮಹೋಪಾಧ್ಯಾಯ ಪಂಡಿತರತ್ನಂ ಶ್ರೀಮಾನ್ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಗ್ರಂಥ ಅಚ್ಚಾಗುವುದರೊಳಗೆ ದಿವಂಗತರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರಿಗೆ ದರ್ಶನಶಾಸ್ತ್ರಗಳಲ್ಲಿ ಅದ್ವಿತೀಯವಾದ ಪಾಂಡಿತ್ಯವಿತ್ತು. ಮೈಸೂರಿನ ಸಂಸ್ಕೃತ ಮಹಾಪಾಠಶಾಲೆಯಲ್ಲಿಯೂ, ಮಹಾರಾಜಾ ಕಾಲೇಜಿನಲ್ಲಿಯೂ ದರ್ಶನಶಾಸ್ತ್ರವನ್ನು ಹಲವು ವರ್ಷಗಳ ಕಾಲ ವಿದ್ಯಾರ್ಥಿಗಳಿಗೆ ಬೋಧಿಸಿ ಅವರ ಮೆಚ್ಚಿಗೆಗೆ ಪಾತ್ರರಾಗಿದ್ದರು. ಅವರು ತತ್ವಜ್ಞರು ಮಾತ್ರವೇ ಅಲ್ಲ; ಅವರ ಬಾಳೂ ತತ್ವಮಯವಾಗಿಯೇ ರೂಪುಗೊಂಡಿತ್ತು. ಅವರ ಹೃದಯ ಉದಾರವಾದದ್ದು; ದೃಷ್ಟಿ ವಿಶಾಲವಾದದ್ದು; ಹಳೆಯದನ್ನು ಹೊಸಕಣ್ಣಿನಿಂದ ನೋಡಲು ಸಮರ್ಥರಿದ್ದರು. ವಿಸ್ತಾರವಾದ ಅವರ ವ್ಯಾಸಂಗವೂ ರಹಸ್ಯವನ್ನು ಭೇದಿಸುವ ತೀಕ್ಷ್ಣ ವಿಮರ್ಶೆಯೂ ಸಾತ್ವಿಕ ಜೀವನವೂ ಪೂರ್ಣವಾದ ಅನುಭವವೂ ಅವರು ಬರೆದಿರುವ 'ದರ್ಶನೋದಯ' ಎಂಬ ಸಂಸ್ಕೃತ ಗ್ರಂಥದಲ್ಲಿ ಕಂಡು ಬರುತ್ತವೆ. ಅಲ್ಲಿ ಹೇಳಿರುವ ವಿಷಯಗಳನ್ನು ಈ ಕನ್ನಡ ಗ್ರಂಥದಲ್ಲಿ ಸಂಗ್ರಹಿಸಿದ್ದಾರೆ.

ಸೃಷ್ಟಿಯ ಮರ್ಮವನ್ನು ಒಡೆದು ನೋಡುವುದಕ್ಕಾಗಿ ನಮ್ಮ ದೇಶದ ಪ್ರಾಚೀನ ದಾರ್ಶನಿಕರು ಯಾವ ಯಾವ ದಾರಿಗಳಲ್ಲಿ ಹೊರಟರು, ಅವರು ಉಪಯೋಗಿಸಿಕೊಂಡ ಸಾಧನ ಸಾಮಗ್ರಿಗಳೇನು, ಅವರ ವಿಚಾರ ಸರಣಿ ಹೇಗಿದೆ, ಅವರ ತರ್ಕ ಎಷ್ಟು ಹರಿತವಾಗಿದೆ, ಅವರು ಸಾಧಿಸಿದ್ದೇನು- ಎಂಬಿವೇ ಮುಂತಾದ ವಿಷಯಗಳನ್ನು ಈ ಗ್ರಂಥದಲ್ಲಿ ತಕ್ಕಮಟ್ಟಿಗೆ ಕಾಣಬಹುದು. ವಿಷಯ ದೊಡ್ಡದು, ಸಮಸ್ಯೆಗಳು ಬಹುಮುಖವಾದವು, ವಾದವಾದಗಳು ಬುದ್ಧಿ ಸೂಕ್ಷ್ಮತೆಯಿಂದ ಕೂಡಿದುವು; "ನೈಕೋ ಋಷಿಃ ಯಸ್ಯ ಮತಂ ಪ್ರಮಾಣಂ" ಎಂಬಂತೆ ಜಿಜ್ಞಾಸೆ ಯಾವ ನಿಲುಗಡೆಗೂ ಬಾರದು; ಆದರೂ ಮನುಷ್ಯನ ಸತ್ಯವನ್ನರಸುವ ಪ್ರಯತ್ನ ಸಂತತವಾಗಿ ಸಾಗುತ್ತಿದೆ. ಸಾಮಾನ್ಯ ವಾಚಕರಿಗಾಗಿ ಇಂಥ ಗಹನವಾದ ವಿಷಯವನ್ನು ಆದಷ್ಟೂ ಸುಲಭ ಸರಳವಾಗಿ ಬರೆಯಲು ಗ್ರಂಥಕರ್ತರು ಪ್ರಯತ್ನಿಸಿದ್ದಾರೆ.

ಈ ಪುಸ್ತಕದ ಮುದ್ರಣಕಾರ್ಯದಲ್ಲಿ ನನಗೆ ನೆರವಾದ ಶ್ರೀ ಡಿ.ಎಲ್. ನರಸಿಂಹಾಚಾರ್, ಎಂ.ಎ. ಅವರಿಗೂ ಗ್ರಂಥವನ್ನು ಸಮರ್ಪಕವಾಗಿಯೂ ಅಂದವಾಗಿಯೂ ಅಚ್ಚುಹಾಕಿರುವ ವೆಸ್ಲಿಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನ ಅಧಿಕಾರಿಗಳಿಗೂ ತುಂಬ ಕೃತಜ್ಞನಾಗಿದ್ದೇನೆ.

[ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ ಅವರ 'ಹಿಂದೂದರ್ಶನಸಾರ' ಪುಸ್ತಕಕ್ಕೆ ಬರೆದ ಮುನ್ನುಡಿ; ೨೧-೪-೧೯೪೦]

ಪ್ರಬಂಧ ಪ್ರಕಾಶ

ನನ್ನ ಮಾನ್ಯಮಿತ್ರರಾದ ಶ್ರೀಮಾನ್ ಮ. ಶ್ರೀ ದೇಶಪಾಂಡೆಯವರು ಅನುಭವಶಾಲಿಗಳಾದ ಬೋಧಕರೂ, ಶಕ್ತಿವಂತರಾದ ಸಾಹಿತಿಗಳೂ ಆಗಿದ್ದಾರೆ. ಅವರ 'ಪ್ರಬಂಧ ಪ್ರಕಾಶ' ವೆಂಬ ಪ್ರಬಂಧ ರಚನಾ ವಿಷಯಕವಾದ ಗ್ರಂಥ, ಪ್ರಿನ್ಸಿಪಾಲ್ ಗೋಕಾಕರವರಿಂದ ಪ್ರಶಂಸಿಸಲ್ಪಟ್ಟು, ಈಗಾಗಲೇ ಎರಡನೆಯ ಮುದ್ರಣವನ್ನು ಮುಟ್ಟಿ, ಶಾಲೆಗಳಲ್ಲೆಲ್ಲಾ ಬಳಕೆಗೆ ಬಂದಿರುತ್ತದೆ. ಈ 'ಪ್ರಬಂಧ ಪ್ರಕಾಶ'ಎಂಬ ಗ್ರಂಥ ಕಿರಿಯರ ಉಪಯೋಗಕ್ಕಾಗಿ ಆವೃತ್ತಿ ತೆಗೆಯಲ್ಪಟ್ಟಿದೆ. 'ಸಾ ವಿದ್ಯಾ ಯಾ ವಿಮುಕ್ತಯೆ' ಎಂಬ ಇವರ ಧ್ಯೇಯಮಂತ್ರ, ವಿದ್ಯೆಯ ವಿಷಯದಲ್ಲಿ ಗ್ರಂಥಕರ್ತರ ಸ್ಪಷ್ಟ ಅಭಿಪ್ರಾಯವನ್ನು ಎತ್ತಿ ತೋರಿಸುತ್ತದೆ. ಅವರು ಉಜ್ವಲ ಕನ್ನಡ ಭಕ್ತರು; ಕನ್ನಡದ ಮೇಲ್ಮೆಗಾಗಿ ಹೆಣಗುವವರು; ಕನ್ನಡದ ಬರಹವನ್ನು ಸ್ವಚ್ಛಗೊಳಿಸಿ ವೀರ್ಯವತ್ತಾಗಿ ಮಾಡಲು ಉದ್ದೇಶಿಸಿರುವರು. ಈ ಎರಡು ಗ್ರಂಥಗಳಲ್ಲಿ ಮೊದಲಿನಿಂದಲೇ ಮಕ್ಕಳಿಗೆ ಭಾಷಾಶುದ್ಧಿಯನ್ನೂ, ಭಾಷಾಪ್ರೇಮವನ್ನೂ ಪ್ರಬಂಧರಚನೆಯಲ್ಲಿ ಗಮನಿಸಬೇಕಾದ ಎಲ್ಲ ಅಂಶಗಳ ನಿಷ್ಕೃಷ್ಟ ತಿಳುವಳಿಕೆಯಿಂದಲೇ ಸಾಧಿಸಲು ಅವಕಾಶ ಮಾಡಿರುತ್ತಾರೆ. 'ಕಾಂಪೊಸಿಷನ್' ಕುರಿತು ಈ ಮಟ್ಟದ ತರಗತಿಗಳಲ್ಲಿ ಹೇಳಬಹುದಾದ ಅಂಶಗಳೆಲ್ಲ ಈ ಗ್ರಂಥಗಳಲ್ಲಿ ಎರಡು ಮೆಟ್ಟಲಲ್ಲಿ ಅಡಕವಾಗಿವೆ. ಇಂಗ್ಲಿಷ್ ಗ್ರಂಥಗಳ ಸಾರ ಇಲ್ಲಿದೆ. ವಾಕ್ಯಸ್ವರೂಪ, ಪರಿಚ್ಛೇದ ರಚನೆ, ನಾನಾ ಬಗೆಯ ಪ್ರಬಂಧಗಳು, ಅವುಗಳ ರೂಪರೇಖೆ, ಶಬ್ದಗಳನ್ನು ಆಯುವ ತತ್ವ, ಛಂದಸ್ಸು, ಕಾರ್ಯಕಾರಿಯಾಗುವಷ್ಟು

ವ್ಯಾಕರಣ, ವ್ಯವಹಾರಪತ್ರಗಳು, ಸಂವಾದ, ಗುಣಗ್ರಹಣ, ವಿಮರ್ಶೆ ಮುಂತಾದ ಮುಖ್ಯಾಂಶಗಳೆಲ್ಲ ಎರಡು ಗ್ರಂಥಗಳಲ್ಲಿ ಅವುಗಳ ಮಟ್ಟಕ್ಕೆ ಸರಿಯಾಗಿ ವಿವರಣೆಗೊಂಡಿವೆ. ಪುಸ್ತಕಗಳ ಶೈಲಿ ನೇರವಾಗಿಯೂ, ತಿಳಿಯಾಗಿಯೂ, ಸ್ಫುಟವಾಗಿಯೂ ಇದೆ. ಕನ್ನಡದ ಕೆಲವು ರೂಢಿಗಳೂ, ವೈಶಿಷ್ಟ್ಯಗಳೂ ಅನುಬಂಧದಲ್ಲಿ ಸೇರಿವೆ. ಉದಾಹರಣೆಗಳು ಬಹುಶಃ ಪ್ರಸಿದ್ಧ ನೂತನ ಸಾಹಿತಿಗಳ ಗ್ರಂಥಗಳಿಂದ ತೆಗೆದಿವೆ. ಹೀಗೆ ಕನ್ನಡದ ಪ್ರಬಂಧರಚನೆಗೆ ತಕ್ಕ ಜ್ಞಾನವನ್ನು ಕೊಡುವ ಪುಸ್ತಕಗಳು ಕನ್ನಡದಲ್ಲಿ ಹೆಚ್ಚಿಲ್ಲ. ಒಂದೆರಡು ಮಾತ್ರ ಇರಬಹುದು. ನಾನು ನೋಡಿದ ಪುಸ್ತಕಗಳಲ್ಲಿ ಮ. ಶ್ರೀ. ದೇಶಪಾಂಡೆಯವರ ಪುಸ್ತಕಗಳು ಬಹು ವಿಶಾಲವಾಗಿಯೂ, ಸಂಪೂರ್ಣವಾಗಿಯೂ, ಪ್ರಯೋಜನಕರವಾಗಿಯೂ ಇವೆ. ಈ ಕಿರಿಯರ ಆವೃತ್ತಿ ಕೆಳಮಟ್ಟದಲ್ಲಿಯ ತರಗತಿಗಳಿಗೆ ಬಲುಯೋಗ್ಯವಾಗಿದೆ, ಎಂದು ನಾನು ಸಂತೋಷದಿಂದ ಹೇಳುತ್ತೇನೆ.-ಇಷ್ಟೇ ಅಲ್ಲ, ಇವು ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಬಹುದಾಗಿ ನನಗೆ ತೋರುತ್ತದೆ. ಕರ್ನಾಟಕ ಭಾಷೆಯ ಏಕೀಕರಣಕ್ಕೆ ಇವು ಸಹಾಯಕವಾಗಬಲ್ಲವು.

[ದೇಶಪಾಂಡೆ ಮನೋಹರರಾಯರ 'ಪ್ರಬಂಧ ಪ್ರಕಾಶ' ಪುಸ್ತಕದ ಕಿರಿಯರ ಆವೃತ್ತಿಗೆ ಬರೆದ ಮುನ್ನುಡಿ; ೮-೨-೧೯೪೧]

ಆಂಡ್ರೂ ಕಾರ್ನೆಗಿ

ದೇಶಾಭಿಮಾನಿಗಳೂ ಕರ್ಣಾಟದ ಭಾಷಾಭಿಮಾನಿಗಳೂ ಆದ ಶ್ರೀಮಾನ್ ಜಿ. ಆರ್. ಜೋಸ್ಯರ್ ಅವರು 'ವ್ಯಾಪಾರ', 'ಸಮಾಜೋನ್ನತಿ', 'ಆಂಡ್ರೂ ಕಾರ್ನೆಗಿ' ಮುಂತಾದ ಸಣ್ಣ ಪುಸ್ತಕಗಳನ್ನು ರಚಿಸಿ, ನವೀನ ಪ್ರಪಂಚದಲ್ಲಿ ಅಭ್ಯುದಯವನ್ನು ಪಡೆದಿರತಕ್ಕ ಜನಾಂಗಗಳ ರಹಸ್ಯವನ್ನು ನಮ್ಮ ಜನಕ್ಕೆ ಸುಲಭವಾದ ಭಾಷೆಯಲ್ಲಿ ಸರ್ವರೂ ತಿಳಿಯುವ ರೀತಿಯಲ್ಲಿ ಬೋಧಿಸುತ್ತಿರುತ್ತಾರೆ. ಪಾರಲೌಕಿದ ವಿಷಯಗಳಲ್ಲಿ ಹೇಗೆಯೋ ಹಾಗೆ ಐಹಿಕ ವ್ಯಾಪಾರಗಳಲ್ಲಿಯೂ ನಮ್ಮ ಜನರು ಮುಂದಾಳುಗಳಾಗಬೇಕೆಂಬುದೇ ಇವರ ಉದ್ದೇಶವಾಗಿರುತ್ತದೆ. ಇವರ ಗ್ರಂಥಗಳಿಂದ ಹಿಂದಾಗಿರುವ ಜನಕ್ಕೆ ಹೊಸ ಹೊಸ ಅಭಿಪ್ರಾಯಗಳೂ ಮನೋವೃತ್ತಿಗಳೂ ಸಾಹಸಗಳೂ ಹುಟ್ಟಿ ದೇಶಾಭಿವೃದ್ಧಿಗೆ ಸಹಾಯವಾದರೆ ಇವರ ಶ್ರಮವು ಸಾರ್ಥಕವಾಗುವುದು. ಹಾಗೆ ಆಗಲೆಂಬುದೇ ನನ್ನ ಹಾರೈಕೆ.

[ಜಿ.ಆರ್. ಜೋಸ್ಯರ್ ಅವರ 'ಆಂಡ್ರೂಕಾರ್ನೆಗಿ ಎಂಬ ಕೋಟ್ಯಾಧೀಶ್ವರನ ಕಥೆ' ಪುಸ್ತಕದ ಮುನ್ನುಡಿ.]

ಪ್ರಳಯ ತಾಂಡವ

ಶ್ರೀ ಮಾನ್ ಜಿ. ವಾಸುದೇವರಾಯರು ನನ್ನ ವಿದ್ಯಾರ್ಥಿಗಳು; ಮತ್ತು ಕನ್ನಡದ ಸೇವೆಯನ್ನು ಮಾಡುತ್ತಿರುವ ತರುಣ ಕವಿಗಳಲ್ಲಿ ಮುಂದಕ್ಕೆ ಬರತಕ್ಕವರು ಎಂದು ನಾನು ಚೆನ್ನಾಗಿ ನಂಬಿದ್ದೇನೆ. ಇವರ ಕವಿತೆಗಳು ಪ್ರಬುದ್ಧ ಕರ್ಣಾಟಕದಲ್ಲಿಯೂ ಜಯಕರ್ಣಾಟಕದಲ್ಲಿಯೂ ಆಗಾಗ ಬರುತ್ತಿರುತ್ತವೆ. ಇನ್ನೂ ಅನೇಕ ಕವಿತೆಗಳು ಪ್ರಕಾಶಕ್ಕೆ ಬಂದಿಲ್ಲ.

ಈ ಕವಿತೆಗಳಲ್ಲಿ ಮೂರನ್ನು ಆಯ್ದು ಕನ್ನಡಿಗರಿಗೆ ಕಾಣಿಕೆಯಾಗಿ ಪುಸ್ತಕರೂಪದಲ್ಲಿ ಲೇಖಕರು ಒಪ್ಪಿಸಿರುತ್ತಾರೆ. ಇವುಗಳ ವರ್ಣನೆಯ ರಮ್ಯತೆ, ಛಂದಸ್ಸಿನ ಲಾಲಿತ್ಯ, ಭಾವಗಳ ಸೊಗಸು, ಮುಂತಾದ ಗುಣಗಳನ್ನು ರಸಜ್ಞರು ಉದಾರಚಿತ್ತದಿಂದ ಸ್ವೀಕರಿಸಿ ಪ್ರೋತ್ಸಾಹಗೊಳಿಸಿ ಮಿಕ್ಕ ಕವಿತೆಗಳನ್ನು ಶೀಘ್ರದಲ್ಲಿಯೇ ಹೊರಕ್ಕೆ ತರುವಂತೆ ಮಾಡಲೆಂದು ಹಾರೈಸುತ್ತೇನೆ.

[ಜಿ. ವಾಸುದೇವರಾವ್ ಅವರ 'ಪ್ರಳಯ ತಾಂಡವ' ಕವನ ಸಂಕಲನಕ್ಕೆ ಬರೆದ ಮುನ್ನುಡಿ.]